ಧರ್ಮ ಸಂಸ್ಥಾಪನೆ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಜಮಾಅತೆ ಇಸ್ಲಾಮಿ ಹಿಂದ್‌ನ ರಾಷ್ಟ್ರೀಯ ಸಂಘಟನಾ ವಿಭಾಗ ಪ್ರಕಟಗೊಳಿಸಿದ 'ದಅ್‌ವತೆ ಇಸ್ಲಾಮಿ ಕ್ಯಾಹೈ' ಎಂಬ ಉರ್ದು ಕೃತಿಯ ಕನ್ನಡ ಭಾಷಾಂತರವಾಗಿದೆ 'ಧರ್ಮ ಸಂಸ್ಥಾಪನೆ' ಎಂಬ ಈ ಕೃತಿ. ಇದು ಅದರ ನಾಲ್ಕನೆಯ ಆವೃತ್ತಿಯಾಗಿದೆ. ಮುಸ್ಲಿಮರ ಜೀವನೋದ್ದೇಶ ಮತ್ತು ಅವರ ಹೊಣೆಗಾರಿಕೆಗಳನ್ನು ಈ ಚಿಕ್ಕ ಹೊತ್ತಗೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮುಸ್ಲಿಮ್ ಸಮುದಾಯವು ಸುದೀರ್ಘ ಕಾಲದಿಂದ ಮರೆತಿರುವ ಆ ಹೊಣೆಗಾರಿಕೆಗಳನ್ನು ಅವರಿಗೆ ನೆನಪಿಸಿಕೊಟ್ಟು, ಅವರನ್ನು ಸಂದೇಶಪ್ರಚಾರ ಚಟುವಟಿಕೆಗಳಲ್ಲಿ ಭಾಗಿಗೊಳಿಸಲು ಪ್ರಯತ್ನಿಸುತ್ತಿರುವ ಜಮಾಅತೆ ಇಸ್ಲಾಮಿಯ ಒಂದು ಸಂಕ್ಷಿಪ್ತ ಪರಿಚಯವನ್ನೂ ಇದರಲ್ಲಿ ಕೊಡಲಾಗಿದೆ.

ಈ ಪುಸ್ತಕವು ಮುಸ್ಲಿಮರಿಗೆ ಅವರ ಹೊಣೆಗಾರಿಕೆಯನ್ನರಿಯಲು ನೆರವಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಮೂಲಭೂತ ವಿಶ್ವಾಸ

'ಲಾ ಇಲಾಹ ಇಲ್ಲಲ್ಲಾಹು- ಮುಹಮ್ಮದುರ್‍ರಸೂಲುಲ್ಲಾಹ್' ಎಂಬ ಪವಿತ್ರ ವಚನದ ಮೇಲೆ ಹೃತ್ಪೂರ್ವಕವಾಗಿ ವಿಶ್ವಾಸವಿಡುವವನು ಮುಸ್ಲಿಮನೆನಿಸಿಕೊಳ್ಳುತ್ತಾನೆ ಹಾಗೆ ಮಾಡದವರು ಇಸ್ಲಾಮಿನ ಮೇರೆಯಿಂದ ಹೊರಗುಳಿಯುತ್ತಾನೆ. ಮೊದಲನೆಯ ವ್ಯಕ್ತಿ ಅಲ್ಲಾಹನ ಸಂಪ್ರೀತಿಗೆ ಅರ್ಹನೆನಿಸುತ್ತಾನೆ. ಅವನ ಅನುಗ್ರಹಗಳಿಗೆ ಪಾತ್ರನಾಗುತ್ತಾನೆ. ಅವನ ಪಾಲಿಗೆ ಸ್ವರ್ಗದ ದ್ವಾರಗಳು ತೆರೆಯಲ್ಪಡುವುವು. ಎರಡನೆಯ ವ್ಯಕ್ತಿ ಅಲ್ಲಾಹನ ಕ್ರೋಧಕ್ಕೆ ಪಾತ್ರನಾಗುತ್ತಾನೆ. ಪರಲೋಕದ ಶಾಶ್ವತ ಜೀವನದಲ್ಲಿ ಅವನ ನೆಲೆಯು ನರಕವಾಗಿರುವುದು. ಇದು ಪವಿತ್ರ ಕುರ್‌ಆನ್ ಪ್ರತಿಪಾದಿಸುವ ಸಿದ್ಧಾಂತ. ಎಲ್ಲಾ ಮನುಷ್ಯರೂ ಅಲ್ಲಾಹನ ದಾಸರಾಗಿದ್ದು, ಅವನೇ ಎಲ್ಲರನ್ನೂ ಸೃಷ್ಟಿಸಿದವನೂ ಪರಿಪಾಲಿಸುವವನೂ ಆಗಿರುವಾಗ ಕೇವಲ 'ಲಾ ಇಲಾಹ ಇಲ್ಲಲ್ಲಾಹು' ಮತ್ತು 'ಮುಹಮ್ಮದುರ್‍ರಸೂಲುಲ್ಲಾಹ್' ಎಂಬ ಎರಡು ವಚನಗಳನ್ನು ಅಂಗೀಕರಿಸಿದ ಮಾತ್ರಕ್ಕೆ ಮನುಷ್ಯ-ಮನುಷ್ಯರ ಮಧ್ಯೆ ಇಷ್ಟು ದೊಡ್ಡ ಅಂತರ ಉಂಟಾಗುವುದಾದರೂ ಹೇಗೆ ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿ. ಮನುಷ್ಯರನ್ನು ಈ ರೀತಿ ಎರಡು ಬಣಗಳಾಗಿ ವಿಂಗಡಿಸುವ ವಿಷಯ ಈ ಎರಡು ವಾಕ್ಯಗಳಲ್ಲಿರುವುದಾದರೂ ಯಾವುದು?

ಈ ಎರಡು ವಾಕ್ಯಗಳ ಶಬ್ದಗಳನ್ನು ಉಚ್ಚರಿಸಿದ ಮಾತ್ರಕ್ಕೆ ಮನುಷ್ಯರ ಮಧ್ಯೆ ಇಷ್ಟು ದೊಡ್ಡ ಅಂತರ ಉಂಟಾಗಲು ಅದರಲ್ಲೇನೋ ಮಾಂತ್ರಿಕ ಶಕ್ತಿ ಇದೆ ಎಂದರೆ ಯಾರೂ ನಂಬಲಾರರು. ಈ ಎರಡು ವಚನಗಳಲ್ಲಿ ಅಡಕವಾಗಿರುವ ವಿಷಯಗಳನ್ನು ಒಪ್ಪುವ ಮತ್ತು ಒಪ್ಪದಿರುವ ಕಾರಣದಿಂದಲೇ ಆ ಅಂತರವು ಉಂಟಾಗುತ್ತದೆಂಬುದು ಸ್ಪಷ್ಟ. ಈ ಎರಡು ವಚನಗಳನ್ನು ಶುದ್ಧ ಹೃದಯದೊಂದಿಗೆ ಒಪ್ಪಿಕೊಳ್ಳುವವನು ವಾಸ್ತವದಲ್ಲಿ ಎರಡು ಮಹತ್ವಪೂರ್ಣ ಹಾಗೂ ಮೂಲಭೂತವಾದ ವಿಷಯಗಳನ್ನು ಒಪ್ಪಿಕೊಂಡು ಅವು ತನ್ನ ಹೃದಯದಲ್ಲಿ ಬೇರೂರಿಕೊಂಡಿವೆ ಎಂದು ಸಾರುತ್ತಾನೆ. ಒಂದು ವಿಷಯವು ಮನುಷ್ಯನ ಹೃದಯದಲ್ಲಿ ಬೇರೂರಿ ಬಿಟ್ಟರೆ ಅವನ ನೀತಿ

ನಡವಳಿಕೆಗಳು ಅದರ ಪ್ರಕಾರವೇ ರೂಪುಗೊಳ್ಳುತ್ತವೆಂಬುದು ವ್ಯಕ್ತ. ಉದಾಹರಣೆಗೆ ಹಣದ ವ್ಯಾಮೋಹ ಹೃದಯದಲ್ಲಿ ಬೇರೂರಿರುವ ಒಬ್ಬ ವ್ಯಕ್ತಿಯನ್ನೇ ತೆಗೆದು ಕೊಳ್ಳಿರಿ. ಅವನ ಮಾತುಕತೆ, ವ್ಯವಹಾರ, ಸಂಬಂಧ ಇತ್ಯಾದಿಗಳ ಪೈಕಿ ಪ್ರತಿಯೊಂದು ವಿಷಯದಲ್ಲೂ ಅವನು ಧನಮೋಹ ಉಳ್ಳವನೆಂಬುದನ್ನು ನೀವು ಅರಿತುಕೊಳ್ಳುವಿರಿ. ಅವನ ದೃಷ್ಟಿಯಲ್ಲಿ ಹಣಕ್ಕಿಂತ ಮಿಗಿಲಾದ ಯಾವ ವಸ್ತುವೂ ಇರಲಾರದು. ಮುಂಜಾನೆಯಿಂದ ಸಂಜೆಯ ತನಕದ ಅವನ ಚಟುವಟಿಕೆ, ಪ್ರಯತ್ನ, ಪರಿಶ್ರಮ ಹಾಗೂ ಅಭಿರುಚಿಗಳಿಂದ ಆತ ಕೇವಲ ಹಣವನ್ನೇ ಬಯಸುತ್ತಾನೆ ಎಂಬುದು ವ್ಯಕ್ತ ವಾದೀತು. ಸಂಬಂಧವಾಗಲೀ ನೆಂಟಸ್ತಿಕೆಯಾಗಲೀ ಮಿತ್ರತ್ವವಾಗಲೀ ಯಾವುದೂ ಆತನ ಮಟ್ಟಿಗೆ ಹಣಕ್ಕಿಂತ ಹೆಚ್ಚು ಪ್ರಾಮುಖ್ಯವಿರಲಾರದು.

ಇದೇ ರೀತಿ ರಾಷ್ಟ್ರ ಭಕ್ತಿಯನ್ನು ಹೃದಯದಲ್ಲಿ ಬೇರೂರಿಸಿಕೊಂಡವರು, ಅಧಿಕಾರ ಗದ್ದುಗೆಯನ್ನು ಪಡೆಯುವುದನ್ನೇ ತಮ್ಮ ಜೀವನದ ಉದ್ದೇಶವಾಗಿರಿಸಿ ಕೊಂಡವರು ಹಾಗೂ ಯಾವುದಾದರೂ ವೈಜ್ಞಾನಿಕ ಸಾಧನೆಯನ್ನು ಧ್ಯೇಯವಾಗಿರಿಸಿ ಕೊಂಡವರು ಕೂಡಾ ತಂತಮ್ಮ ಜೀವಮಾನ ಗಳನ್ನು ಅದಕ್ಕನುಸಾರವಾಗಿ ರೂಪಿಸಿ ಕೊಂಡಿರುವುದನ್ನು ನೀವು ಕಾಣುವಿರಿ. ಅವರ ಮಾತು-ಕೃತಿ, ಚಲನ-ವಲನಗಳೆಲ್ಲವೂ ಅವರು ನೆಚ್ಚಿಕೊಂಡಿರುವ ಧ್ಯೇಯಕ್ಕಾಗಿ ಮುಡಿಪಾಗಿರುವುವು.

ಪವಿತ್ರ ವಚನದ ತಾತ್ಪರ್ಯ

ಮನುಷ್ಯರನ್ನು ಸತ್ಯನಿಷೇಧಿಯಿಂದ ಸತ್ಯವಿಶ್ವಾಸಿಯಾಗಿ; ಅಪವಿತ್ರನಿಂದ ಪವಿತ್ರ ನಾಗಿ; ನರಕದವನಿಂದ ಸ್ವರ್ಗದವನಾಗಿ ಮಾರ್ಪಡಿಸುವ ಆ ಎರಡು ವಚನಗಳ ಅರ್ಥ-ತಾತ್ಪರ್ಯ ಮತ್ತು ಅವುಗಳಲ್ಲಡಕವಾಗಿರುವ ಮಹತ್ವಪೂರ್ಣ ವಿಷಯಗಳನ್ನು ತಿಳಿಯೋಣ. ಈ ಎರಡು ವಚನಗಳ ಮೂಲಕ ಮನುಷ್ಯನು ಅಂಗೀಕರಿಸುವ ಎರಡು ವಿಷಯಗಳ ಪೈಕಿ ಮೊದಲನೆಯದು ಅಲ್ಲಾಹನ ಹೊರತು ಯಾರನ್ನೂ ನಾನು ಆರಾಧ್ಯ ನೆಂದು ಪರಿಗಣಿಸುವುದಿಲ್ಲ ಎಂಬುದಾಗಿದೆ. ಎರಡನೆಯದು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂಬುದಾಗಿದೆ. ಅಲ್ಲಾಹನ ಹೊರತು ಅನ್ಯ ಆರಾಧ್ಯರನ್ನು ತಾನು ಅಂಗೀಕರಿಸುವುದಿಲ್ಲ ಎನ್ನುವುದರ ತಾತ್ಪರ್ಯವೇನೆಂದರೆ ಅವನ ದೃಷ್ಟಿಯಲ್ಲಿ ಸೃಷ್ಟಿಕರ್ತನು ಅಲ್ಲಾಹನು ಮಾತ್ರ. ಅವನ ಹೊರತು ಯಾರೂ ಯಾರನ್ನೂ ಸೃಷ್ಟಿಸಿದವನಿಲ್ಲ. ಸೃಷ್ಟಿಸಲು ಸಾಧ್ಯವೂ ಇಲ್ಲ. ಅವನೇ ಎಲ್ಲರ ಒಡೆಯ, ಪರಿಪಾಲಕ ಮತ್ತು ನೈಜ ಅಧಿಪತಿಯಾಗಿದ್ದಾನೆ. ಅವನ ಹೊರತು ಬೇರೆ ಒಡೆಯನಿಲ್ಲ. ಬೇರೆ

ಅಧಿಪತಿ ಇಲ್ಲ. ಬೇರೆ ಅನ್ನಾಹಾರಗಳನ್ನು ನೀಡುವವನಿಲ್ಲ. ಪ್ರಾರ್ಥನೆಗಳನ್ನು ಆಲಿಸುವವನೂ ಸ್ವೀಕರಿಸುವವನೂ ಇಲ್ಲ. ಬೇರೆ ಯಾರೂ ಮನುಷ್ಯರ ಆರಾಧನೆ, ದಾಸ್ಯ ಮತ್ತು ಅನುಸರಣೆಗೆ ಯೋಗ್ಯರಿಲ್ಲ. ಈ ಜಗತ್ತು ತನ್ನಿಂತಾನೇ ಉಂಟಾದುದಲ್ಲ. ಇದನ್ನು ಉಂಟು ಮಾಡಿದವನು ಕೇವಲ ಒಬ್ಬ ಅಲ್ಲಾಹನಾಗಿದ್ದಾನೆ. ಅವನೇ ಅಖಿಲ ಜಗತ್ತಿನ ಒಡೆಯ, ಇಲ್ಲಿ ಇರುವುದೆಲ್ಲವೂ ಅವನದೇ ಆಗಿವೆ. ಜೀವನ ಮರಣಗಳು ಅವನ ಹಸ್ತದಲ್ಲಿವೆ. ಕಷ್ಟ, ಸುಖಗಳು ಆತನ ವತಿಯಿಂದಲೇ ಬರುತ್ತವೆ. ಅವನು ನೀಡಬಯಸಿದರೆ ಯಾರೂ ತಡೆಯುವವರಿಲ್ಲ, ಅವನು ನೀಡದಿದ್ದರೆ ಯಾರೂ ಕೊಡಿಸುವವರೂ ಇಲ್ಲ. ಮನುಷ್ಯನ ಭಯಭಕ್ತಿಗಳಿಗೆ ಅರ್ಹನು ಅವನೊಬ್ಬನೇ. ಅವನ ಕ್ರೋಧದಿಂದ ಪಾರಾಗಬೇಕು. ಅವನ ಮುಂದೆ ಮಾತ್ರ ಕೈ ಚಾಚಬೇಕು. ಅವನ ಮುಂದೆಯೇ ಶಿರಬಾಗಬೇಕು. ಅವನ ಮಾತ್ರ ದಾಸ್ಯ ಕೈಗೊಳ್ಳಬೇಕು. ಏಕೆಂದರೆ ಮನುಷ್ಯನು ಆತನ ಹೊರತು ಇನ್ನಾರ ದಾಸನೂ ಅಲ್ಲ. ಆ ಏಕದೇವನ ಹೊರತು ಬೇರೆ ಯಾರೂ ಅವನ ಒಡೆಯನಾಗಲೀ ಪ್ರಭುವಾಗಲೀ ಅಲ್ಲ. ಆದ್ದರಿಂದ ಮನುಷ್ಯನು ಆತನ ಆಜ್ಞಾನುಸಾರಿ ಯಾಗುವುದು ಮತ್ತು ಅವನು ನೀಡಿದ ಕಾನೂನಿನ ಪ್ರಕಾರ ಜೀವಿಸುವುದು ಆತನ ನೈಜ ಕರ್ತವ್ಯವಾಗಿದೆ.

ಇದು ಎಷ್ಟು ದೊಡ್ಡ ಕರಾರು! ಈ ಕರಾರನ್ನು ಮನಃಪೂರ್ವಕವಾಗಿ ಮಾಡಿದರೆ ಜೀವನದ ಮೇಲೆ ಅದು ಯಾವ ರೀತಿ ಪರಿಣಾಮ ಬೀರುತ್ತದೆಂಬುದನ್ನು ಸ್ವಲ್ಪ ಯೋಚಿಸಿ ನೋಡಿ. ಒಬ್ಬ ವ್ಯಕ್ತಿ ಸರಿಯಾಗಿ ಅರಿತುಕೊಂಡು ಅಲ್ಲಾಹನ ಹೊರತು ಅನ್ಯರನ್ನು ತಾನು ಆರಾಧ್ಯರೆಂದು ಪರಿಗಣಿಸುವುದಿಲ್ಲವೆಂಬುದನ್ನು ಅಂಗೀಕರಿಸಿದ ಬಳಿಕ ಆತನ ಹೊರತು ಇತರರನ್ನು ತನ್ನ ನೈಜ ಪ್ರಭು ಹಾಗೂ ಒಡೆಯನೆಂದು ಬಗೆಯುವುದು ಹೇಗೆ? ಆತನ ಹೊರತು ಇತರರು ತನ್ನ ಸಂಕಷ್ಟಗಳನ್ನು ನಿವಾರಿಸಬಲ್ಲರು, ತನ್ನ ಅವಶ್ಯಕತೆಗಳನ್ನು ಪೂರೈಸಬಲ್ಲರು, ತನ್ನ ಮೊರೆಗಳನ್ನು ಆಲಿಸಬಲ್ಲರು ಅಥವಾ ತನಗೆ ಯಾವುದಾದರೂ ರೀತಿಯಲ್ಲಿ ಲಾಭ ಅಥವಾ ನಷ್ಟ ಉಂಟು ಮಾಡಬಲ್ಲರು ಎಂದು ಭಾವಿಸುವುದಾದರೂ ಹೇಗೆ? ಈಗಂತೂ ಅವನ ಮನಸ್ಸಿನಲ್ಲಿ ಅಲ್ಲಾಹನ ಹೊರತು ಇತರರ ಭಯ ಇರಲು ಸಾಧ್ಯವೇ ಇಲ್ಲ. ಅವನು ಅನ್ಯರ ಮೇಲೆ ಭರವಸೆ ಹೊಂದಲು, ಅವರಿಂದ ನಿರೀಕ್ಷೆಗಳನ್ನಿಡಲು ಸಾಧ್ಯವೇ ಇಲ್ಲ. ಏಕೆಂದರೆ ಶಕ್ತಿ ಮತ್ತು ಆಧಿಪತ್ಯ ಅಲ್ಲಾಹನ ಬಳಿಯಲ್ಲೇ ಇವೆ. ಎಲ್ಲಾ ಅಧಿಕಾರಗಳೂ ಅವನಿಗೇ ಪ್ರಾಪ್ತವಿದೆ ಎಂಬುದನ್ನು ಅವನು ಅಂಗೀಕರಿಸಿ ಆಗಿದೆ. ಹಾಗಿರುತ್ತಾ ಆತನು ಇತರರನ್ನು ಲಾಭ-ನಷ್ಟಗಳನ್ನು ಉಂಟು ಮಾಡಬಲ್ಲವರೆಂದು ಬಗೆಯುವುದಾದರೂ ಹೇಗೆ?

ಬೇಡಿಕೆಗಳು

ಇದೇ ರೀತಿ ಅಲ್ಲಾಹನ ಹೊರತು ಅನ್ಯ ಒಡೆಯನಾಗಲೀ ಆರಾಧ್ಯನಾಗಲೀ ಇಲ್ಲವೆಂಬ ದೃಢ ವಿಶ್ವಾಸ ಮನಸ್ಸಿನಲ್ಲಿ ಬೇರೂರಿದ ಬಳಿಕ ಮನುಷ್ಯನು ಅಲ್ಲಾಹನ ಹೊರತು ಇತರರನ್ನು ಆರಾಧಿಸುವುದು ಅಸಾಧ್ಯ. ಆತ ಅನ್ಯರಿಗೆ ಹರಕೆ ಕಾಣಿಕೆಗಳನ್ನು ಸಲ್ಲಿಸಲಾರ. ಇತರರ ಮುಂದೆ ಕೈಕಟ್ಟಿ ಶಿರಬಾಗಿ ನಿಲ್ಲಲಾರ. ಸಾಷ್ಟಾಂಗವೆರಗಲಾರ. ಬಹುದೇವಾರಾಧಕರು ತಮ್ಮ ದೇವತೆಗಳ ಮುಂದೆ ಮಾಡುವಂತಹ ಯಾವುದೇ ರೀತಿಯ ಗೌರವಾರ್ಪಣೆಯನ್ನು ಆತನು ಅಲ್ಲಾಹನ ಹೊರತು ಇತರರಿಗೆ ಮಾಡಲಾರ. ಈ ಪ್ರತಿಜ್ಞೆ ಮತ್ತು ದೃಢ ವಿಶ್ವಾಸದ ಬಳಿಕ ಆತನು ಅಲ್ಲಾಹನ ಹೊರತು ಇತರ ಯಾರಿಗೂ ಪ್ರಾರ್ಥನೆಗಳನ್ನು ಸಲ್ಲಿಸಲಾರ. ಇತರ ಯಾರ ಆಶ್ರಯವನ್ನೂ ಕೋರಲಾರ. ಇತರ ಯಾರನ್ನೂ ಸಹಾಯಕ್ಕಾಗಿ ಮೊರೆಯಿಡಲಾರ. ಏಕೆಂದರೆ ಅವನ ದೃಷ್ಟಿಯಲ್ಲಿ ಯಾರ ಆಜ್ಞಾಧಿಕಾರವೂ ಈ ವಿಶ್ವದಲ್ಲಿ ನಡೆಯುವುದಿಲ್ಲ. ಇತರ ಯಾರೂ ಪ್ರಾರ್ಥನೆಗಳನ್ನು ಆಲಿಸುವವರಿಲ್ಲ. ಇತರ ಯಾರೂ ಆಶ್ರಯ ನೀಡುವವರಾಗಲೀ ಸಂಕಷ್ಟಗಳಲ್ಲಿ ನೆರವಾಗುವವರಾಗಲೀ ಇಲ್ಲ.*

ಈ ಪ್ರತಿಜ್ಞೆ ಮತ್ತು ದೃಢ ವಿಶ್ವಾಸದ ಒಂದು ಅನಿವಾರ್ಯ ಪರಿಣಾಮ ಮತ್ತು ಅಗತ್ಯ ಬೇಡಿಕೆ ಎಂಬ ನೆಲೆಯಲ್ಲಿ ಮನುಷ್ಯನು ಅಲ್ಲಾಹನ ಹೊರತು ಇತರ ಯಾರನ್ನೂ ಜಗತ್ತಿನ ಒಡೆಯನೆಂದು ಪರಿಗಣಿಸಬಾರದು. ಅವನ ಹೊರತು ಇತರ ಯಾರಿಗೂ ಇಷ್ಟಬಂದಂತೆ ಆಜ್ಞಾಪಿಸುವ ಮತ್ತು ನಿಷೇಧಿಸುವ ಅಧಿಕಾರವಿಲ್ಲ. ಇತರ ಯಾರಿಗೂ ಸ್ವತಂತ್ರ ಕಾನೂನು ರಚನೆಯ ಅಧಿಕಾರವಿಲ್ಲ. ಸಂಪೂರ್ಣ ವಿಶ್ವದ ಒಡೆಯ ಅಲ್ಲಾಹನಾಗಿರುವಾಗ ತನ್ನ ದಾಸರಿಗೆ ಇಷ್ಟ ಬಂದಂತೆ ಆಜ್ಞಾಪಿಸುವ ಮತ್ತು ಅವರಿಗಾಗಿ ಕಾನೂನು ರಚಿಸುವ ಅಧಿಕಾರವೂ ಅವನಿಗೇ ಇರುವುದು. ಆ ನೈಜ ಒಡೆಯನ ಆಜ್ಞೆಗಳನ್ನೂ ಕಾನೂನುಗಳನ್ನೂ ಪಾಲಿಸುವುದು ಮತ್ತು ಅವನ ಹೊರತು, ಅವನ ಮಾರ್ಗದರ್ಶನದಿಂದ ಮುಕ್ತವಾಗಿ ಇತರರು ರಚಿಸಿದ ಕಾನೂನನ್ನು ಸರಿ ಎಂದು ಪರಿಗಣಿಸದಿರುವುದಾಗಿದೆ. ಅವನ ದಾಸರಾದ ಮನುಷ್ಯರ ಮುಂದೆ ಇರುವ ಸರಿಯಾದ ಮಾರ್ಗವಾಗಿದೆ.

ಇಷ್ಟು ಮಾತ್ರವಲ್ಲ. 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ತನ್ನ

---

*ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಮಾಡುವ ಸಹಾಯ, ಅವನ ಕಷ್ಟ ಕಾಲದಲ್ಲಿ ನೀಡುವ ನೆರವು, ಅವನೊಂದಿಗೆ ಪ್ರಕಟಿಸುವ ಸಹಾನುಭೂತಿ ತೀರಾ ಭಿನ್ನ ವಿಚಾರ. ಇಲ್ಲಿ ಪ್ರಸ್ತಾಪಿಸಲಾಗಿರುವುದು ಲೌಕಿಕ ಕಾರ್ಯಕಾರಣಗಳಿಂದ ಅತೀತವಾದ ಪರೋಕ್ಷ ಆಶ್ರಯ ಮತ್ತು ಸಹಾಯವಾಗಿದೆ.

ಮೂಲ ವಿಶ್ವಾಸವಾಗಿ ಅಂಗೀಕರಿಸಿದ ಬಳಿಕ ಮನುಷ್ಯನು ತನ್ನ ಮನಸ್ಸಿಗೆ ಬಂದಂತೆ ವರ್ತಿಸುವಂತೆಯೂ ಇಲ್ಲ. ಆತನು ತನಗಿಷ್ಟ ಬಂದದ್ದನ್ನು ಮಾಡಲು ಸ್ವತಂತ್ರನಾಗಿರುವುದಿಲ್ಲ. ಅವನು ತನ್ನ ಬಯಕೆ ಬೇಡಿಕೆಗಳನ್ನು ಅಲ್ಲಾಹನ ಇಚ್ಛೆಗೆ ಅಧೀನಗೊಳಿಸಬೇಕು. ಯಥಾರ್ಥದಲ್ಲಿ ಯಾವ ವಸ್ತುವೂ ತನ್ನದಲ್ಲವೆಂದೂ ತನ್ನ ಶರೀರವೂ ಶಕ್ತಿ-ಸಾಮರ್ಥ್ಯಗಳೂ ಕೂಡಾ ವಾಸ್ತವದಲ್ಲಿ ತನ್ನದಲ್ಲ, ಅವುಗಳ ನೈಜ ಒಡೆಯನು ಅಲ್ಲಾಹನೆಂದೂ ಅವುಗಳನ್ನು ಒಂದು ವಿಶ್ವಸ್ಥ ನಿಧಿ(Trust) ಎಂಬ ರೂಪದಲ್ಲಿ ತನಗೆ ನೀಡಲಾಗಿದೆಯೆಂದೂ ಒಪ್ಪಿಕೊಂಡ ಬಳಿಕ ಆ ಪೈಕಿ ಯಾವ ವಸ್ತುವನ್ನೂ ಅವನು ಅದರ ನೈಜ ಒಡೆಯನಾದ ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಬಳಸಬಾರದು. ಈ ಎಲ್ಲ ವಸ್ತುಗಳನ್ನೂ ಶಕ್ತಿ ಸಾಮರ್ಥ್ಯಗಳನ್ನೂ ನೀಡಲಾಗಿರುವುದು ಅವುಗಳನ್ನು ನೀಡಿರುವ ಅಲ್ಲಾಹನ ಇಚ್ಛೆಯಂತೆ ಉಪಯೋಗಿಸುವ ಸಲುವಾಗಿ ಮಾತ್ರ. ಆದ್ದರಿಂದ ಒಂದು ದಿನ ಆ ದೇವನ ಮುಂದೆ ಹಾಜರಾಗಲಿಕ್ಕಿದೆ ಮತ್ತು ಅವನು ನೀಡಿರುವ ವಿಶ್ವಸ್ಥ ನಿಧಿ(Trust)ಗಳನ್ನು ಹೇಗೆ ಉಪಯೋಗಿಸಿದನೆಂಬ ಬಗ್ಗೆ ವಿಚಾರಣೆಗೆ ಒಳಗಾಗಲಿಕ್ಕಿದೆ. ಆ ವಿಶ್ವಸ್ಥ ನಿಧಿಗಳನ್ನು ಅವನು ತನ್ನ ಇಚ್ಛೆಯಂತೆ ಅಥವಾ ತನ್ನಂತಹ ಇತರ ಮನುಷ್ಯರ ಇಚ್ಛೆಯಂತೆ ಉಪಯೋಗಿಸಿದ್ದರೆ ಅವನು ದೇವನ ದೃಷ್ಟಿಯಲ್ಲಿ ಧಿಕ್ಕಾರಿಯಾಗಿರುವನು ಮತ್ತು ಕಠಿಣ ಶಿಕ್ಷೆಗೆ ಗುರಿಯಾಗುವನು.

'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನದ ಮೇಲೆ ವಿಶ್ವಾಸವಿಟ್ಟ ಬಳಿಕ ಅಲ್ಲಾಹನಿಗೆ ಇಷ್ಟವಿಲ್ಲದ ಯಾವ ವಸ್ತುವನ್ನೂ ನಾವು ಇಷ್ಟಪಡುವಂತಿಲ್ಲ. ಅವನಿಗೆ ಇಷ್ಟವಾದ ಯಾವ ವಸ್ತುವನ್ನು ನಾವು ಇಷ್ಟಪಡದಿರುವಂತಿಲ್ಲ. ನಮ್ಮ ಎಲ್ಲ ಚಟುವಟಿಕೆಗಳೂ ಅಲ್ಲಾಹನ ವಿಧೇಯ ದಾಸರಾಗುವ ಸಲುವಾಗಿ ಮತ್ತು ಅವನ ಸಂಪ್ರೀತಿಯನ್ನು ಗಳಿಸುವ ಸಲುವಾಗಿ ಇರಬೇಕು. ಈ ಉದ್ದೇಶಕ್ಕಾಗಿ ಜೀವನದ ಪ್ರತಿಯೊಂದು ವ್ಯವಹಾರದಲ್ಲೂ ಅಲ್ಲಾಹನ ಮಾರ್ಗದರ್ಶನವೇನು ಎಂಬುದನ್ನು ನಾವು ನೋಡುತ್ತಿರಬೇಕು. ನೀತಿ, ನ್ಯಾಯ, ವ್ಯವಹಾರ, ಸಂಬಂಧ, ಅನ್ನಾಹಾರ, ವ್ಯಾಪಾರ, ದುಡಿಮೆ, ವ್ಯಯ, ಕಾನೂನು ರಚನೆ, ಸರಕಾರದ ನಿರ್ವಹಣೆ ಮುಂತಾದ ಜೀವನದ ಎಲ್ಲ ವ್ಯವಹಾರಗಳಲ್ಲೂ ನಾವು ಅಲ್ಲಾಹನು ತೋರಿಸಿದ ಮಾರ್ಗದಲ್ಲೇ ನಡೆಯಬೇಕು. ದೇವನು ನಮಗೆ ನೀಡಿರುವ ಕಾನೂನನ್ನು ಮಾತ್ರ ಸರಿಯಾದ ಮತ್ತು ಧರ್ಮಸಮ್ಮತವಾದ ಕಾನೂನೆಂದೂ, ಅದಕ್ಕೆ ವಿರುದ್ಧವಾದುದೆಲ್ಲವನ್ನೂ ತಪ್ಪೆಂದೂ ಪರಿಗಣಿಸಬೇಕು. ಅಷ್ಟೇ ಅಲ್ಲ, ತಪ್ಪೆಂದು ಸಾರಿ ಹೇಳಬೇಕು. ಅದನ್ನು ಜೀವನ ರಂಗದಿಂದ ಉಚ್ಚಾಟಿಸಲು ಪ್ರಯತ್ನಿಸಬೇಕು.

ಪ್ರವಾದಿತ್ವ

'ಲಾ ಇಲಾಹ ಇಲ್ಲಲ್ಲಾಹ್' ಎಂದ ಬಳಿಕ ನಾವು ಉಚ್ಚರಿಸುವ ಎರಡನೆಯ ವಚನ 'ಮುಹಮ್ಮದುರ್‍ರಸೂಲುಲ್ಲಾಹ್' ಎಂಬುದಾಗಿದೆ. 'ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರು' ಎಂಬುದೇ ಇದರ ತಾತ್ಪರ್ಯ. ಆದಿ ಕಾಲದಿಂದಲೇ ದೇವನಿಂದ ಮಾನವನಿಗೆ ಆತನ ಮಾರ್ಗದರ್ಶನವನ್ನೂ-ಸತ್ಯಧರ್ಮವನ್ನೂ ತಲುಪಿಸಲಿಕ್ಕಾಗಿ ಬೇರೆ ಬೇರೆ ದೇಶಗಳಲ್ಲೂ ಜನಾಂಗಗಳಲ್ಲೂ ನಿರಂತರ ಆಗಮಿಸುತ್ತಿದ್ದ ಪ್ರವಾದಿಗಳ ಪೈಕಿ ಮುಹಮ್ಮದ್(ಸ) ಕೊನೆಯ ಪ್ರವಾದಿಯಾಗಿರುವರು. ಅವರ ಮೂಲಕ ಬಂದ ಧರ್ಮವು ಎಲ್ಲವುಗಳಿಗಿಂತಲೂ ಕೊನೆಯ, ಸಮಗ್ರ ಮತ್ತು ಪರಿಪೂರ್ಣ ಧರ್ಮವಾಗಿದೆ. ಎಲ್ಲ ಕಾಲಗಳಿಗೂ ಎಲ್ಲ ಮಾನವರಿಗೂ ಬಂದ ಧರ್ಮವಾಗಿದೆ. ಇಂತಹ ಧರ್ಮ ಅಥವಾ ಮಾರ್ಗದರ್ಶನದ ಅವಶ್ಯಕತೆಯು ಬಹಳ ಸ್ಪಷ್ಟವಾಗಿದೆ. ಅಲ್ಲಾಹನೇ ಮನುಷ್ಯರ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಆರಾಧ್ಯನೂ ಅಧಿಪತಿಯೂ ಆಗಿರುವಾಗ ಅವನ ಆಜ್ಞೆಗಳೂ ಆದೇಶಗಳೂ ಮನುಷ್ಯರಿಗೆ ಸರಿಯಾಗಿ ತಿಳಿದಿರಬೇಕಾದುದು ಅಗತ್ಯ. ಅವನ ದಾಸರಿಗೆ ತಮ್ಮ ಒಡೆಯನು ತಮ್ಮಿಂದ ಏನನ್ನು ಬಯಸುತ್ತಾನೆ, ತಾವೇನು ಮಾಡಬೇಕು, ಏನು ಮಾಡಬಾರದು, ಯಾವ ಕಾರ್ಯಗಳಿಂದ ತಮ್ಮೊಡೆಯನು ಸಂತುಷ್ಟನಾಗುತ್ತಾನೆ. ಯಾವ ಕಾರ್ಯಗಳು ಆತನಿಗೆ ಅಪ್ರಿಯವಾಗಿವೆ, ಆತನ ಸಂಪ್ರೀತಿ ಗಳಿಸಲು ಮತ್ತು ಪರಲೋಕದಲ್ಲಿ ಆತನ ಕ್ಷಮೆ ಮತ್ತು ಅನುಗ್ರಹಗಳಿಗೆ ಪಾತ್ರರಾಗಲು ಯಾವ ಮಾರ್ಗದಲ್ಲಿ ನಡೆಯಬೇಕು. ಆತನ ಕ್ರೋಧ ಮತ್ತು ಶಿಕ್ಷೆಯಿಂದ ರಕ್ಷಣೆ ಹೊಂದಲು ಯಾವ ಮಾರ್ಗಗಳಿಂದ ದೂರವಿರಬೇಕು ಎಂಬಿತ್ಯಾದಿ ವಿಷಯಗಳನ್ನು ಚೆನ್ನಾಗಿ ತಿಳಿದಿರಬೇಕು. ಇದೇ ಅವಶ್ಯಕತೆಯನ್ನು ಈಡೇರಿಸಲಿಕ್ಕಾಗಿ ಅಲ್ಲಾಹನು ತನ್ನ ಇತರ ಪ್ರವಾದಿಗಳಂತೆ ಹ. ಮುಹಮ್ಮದ್(ಸ) ಅವರನ್ನು ತನ್ನ ಪ್ರವಾದಿಯಾಗಿ ನಿಯೋಗಿಸಿದನು. ಅವರ ಮೂಲಕ ತನ್ನ ಅಭೀಷ್ಟವನ್ನು ನಮಗೆ ತಿಳಿಯಪಡಿಸಿದನು. ಇದೇ ಉದ್ದೇಶಕ್ಕಾಗಿ ತನ್ನ ಗ್ರಂಥವಾದ ಪವಿತ್ರ ಕುರ್‌ಆನನ್ನು ನಮ್ಮ ಬಳಿಗೆ ಕಳುಹಿಸಿದನು. ಅದರಂತೆ ಜೀವನ ನಿರ್ವಹಿಸಿ ಪ್ರವಾದಿ ಮುಹಮ್ಮದ್(ಸ) ಅವರು, ಅಲ್ಲಾಹನ ದಾಸರು ಹೇಗೆ ಜೀವನ ಸಾಗಿಸಬೇಕೆಂಬುದನ್ನು ನಮಗೆ ತೋರಿಸಿಕೊಟ್ಟರು. ಆದುದರಿಂದ ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ವಿಶ್ವಾಸವಿರಿಸುವುದೆಂದರೆ ದೇವಸಂದೇಶವಾಹಕರು ಕಲಿಸಿದ ಪ್ರತಿಯೊಂದು ಮಾತನ್ನು ಪಾಲಿಸಿ ಜೀವಿಸುವುದಾಗಿದೆ. ಅಲ್ಲಾಹನ ಪ್ರವಾದಿ ನೀಡಿದ ಕಾನೂನಿನ ಪ್ರಕಾರವೇ ನಾವು ಜೀವನ ಸಾಗಿಸಬೇಕು. ಅವರು ತೋರಿಸಿಕೊಟ್ಟ ರೀತಿಯಲ್ಲೇ ಅಲ್ಲಾಹನ ಆರಾಧನೆ ಮಾಡಬೇಕು.

ಇಸ್ಲಾಮ್ ಧರ್ಮದಲ್ಲಿ ಪ್ರವೇಶಿಸಿದ ಬಳಿಕ ಪ್ರವಾದಿ ಮುಹಮ್ಮದ್‌ರವರ(ಸ) ಅನುಸರಣೆಯನ್ನು ನಿರಾಕರಿಸುವುದು ಅಥವಾ ಅವರ ಯಾವುದಾದರೊಂದು ಆಜ್ಞೆಯನ್ನು ಸರಿಯಲ್ಲವೆನ್ನುವುದು ಸತ್ಯವಿಶ್ವಾಸಕ್ಕೆ ವಿರುದ್ಧವಾಗಿದೆ. ಅದು ಸ್ಪಷ್ಟವಾದ ಧರ್ಮಭ್ರಷ್ಟತೆಯಾಗಿದೆ. ಯಾವ ಆಜ್ಞೆ ಅಲ್ಲಾಹನ ಪ್ರವಾದಿಯ ವತಿಯಿಂದ ಬಂದಿದ್ದೆ ಎಂದು ನಮಗೆ ಖಾತ್ರಿಯಾಗುತ್ತದೋ ಅದರ ಮುಂದೆ ಶಿರಬಾಗಬೇಕಾದುದು ನಮ್ಮ ಕರ್ತವ್ಯವಾಗಿದೆ. ಯಾವುದರಿಂದ ಅಲ್ಲಾಹನ ಪ್ರವಾದಿ ನಮ್ಮನ್ನು ತಡೆದಿದ್ದಾರೆಂದು ನಮಗೆ ಮನವರಿಕೆ ಯಾಗುತ್ತದೋ ಅದನ್ನು ತೊರೆಯುವುದು ಕೂಡಾ ನಮ್ಮ ಕರ್ತವ್ಯವಾಗಿದೆ. ಯಾವುದೇ ಒಂದು ವಿಷಯವನ್ನು ಅಂಗೀಕರಿಸುವಾಗ ಅದು ಅಲ್ಲಾಹನ ಪ್ರವಾದಿ ತಂದಿರುವ ಧರ್ಮದ ಮತ್ತು ಅವರ ಚರ್ಯೆಯ ಪ್ರಕಾರವಾಗಿದೆಯೋ ಎಂಬುದನ್ನು ಖಾತ್ರಿಪಡಿಸಿ ಕೊಳ್ಳಬೇಕು. ಅದಕ್ಕೆ ವಿರುದ್ಧವಾದ ಎಲ್ಲ ವಿಷಯಗಳನ್ನು ತೊರೆಯಬೇಕು.

ಇದು 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬ ವಚನದ ತಾತ್ಪರ್ಯ ಮತ್ತು ಅದರ ಮೇಲೆ ವಿಶ್ವಾಸವಿಡುವುದರ ಬೇಡಿಕೆಯಾಗಿದೆ. ಈ ವಚನವನ್ನು ಪ್ರಾಮಾಣಿಕವಾಗಿ ಅಂಗೀಕರಿಸುವವನು ಅಲ್ಲಾಹನ ನಿಷ್ಠದಾಸನೂ ಪ್ರವಾದಿ ಮುಹಮ್ಮದ್‌ರವರ(ಸ) ಪರಿಪೂರ್ಣ ಅನುಯಾಯಿಯೂ ಆಗಿರುವನು. ಅವನ ಪೂರ್ಣ ಜೀವನವು ಅಲ್ಲಾಹನ ಅಭೀಷ್ಟ ಮತ್ತು ಅವನ ಧರ್ಮದ ಆದೇಶಗಳಿಗೆ ಅನುಗುಣ ವಾಗಿರುವುದು. ಈ ವಚನದ ಮೇಲೆ ವಿಶ್ವಾಸವಿರಿಸದವನು ಅಲ್ಲಾಹನಿಗೆ ವಿದ್ರೋಹಿಯಾಗಿ ರುವನು. ಲೋಕದಲ್ಲಿ ಈ ಎರಡು ವಿಧದ ಜನರ ಜೀವನ ವಿಧಾನಗಳು ಪರಸ್ಪರ ಭಿನ್ನವಾಗಿರುವುವು. ಆದ್ದರಿಂದ ಪರಲೋಕದಲ್ಲಿ ಅವರ ಪರಿಣಾಮವೂ ವಿಭಿನ್ನವಾಗಿರುವುವು. ಮೊದಲನೆಯವನು ಅಲ್ಲಾಹನ, ಅವನ ಪ್ರವಾದಿಯ ಮತ್ತು ಅವನ ಧರ್ಮದ ನಿಷ್ಠಾವಂತನಾಗಿರುವುದರಿಂದ ಇಹಲೋಕದಲ್ಲೂ ಪರಲೋಕದಲ್ಲೂ ಆತನ ಅನುಗ್ರಹ ಮತ್ತು ಕ್ಷಮೆಗೆ ಅರ್ಹನಾಗಿರುವನು. ಎರಡನೆಯವನು ಅಲ್ಲಾಹನ, ಆತನ ಪ್ರವಾದಿಯ ಮತ್ತು ಅವನ ಧರ್ಮದ ವಿದ್ರೋಹಿ ಮತ್ತು ನಿಷೇಧಿಯಾಗಿರುವುದರಿಂದ ಅವನ ಕ್ರೋಧ ಮತ್ತು ಶಿಕ್ಷೆಗೆ ಪಾತ್ರನಾಗುವನು.

❖ ❖ ❖ ❖

ಇಸ್ಲಾಮ್

ಇಸ್ಲಾಮಿನ ಮೂಲಭೂತ ವಿಶ್ವಾಸವನ್ನು ನೀವು ತಿಳಿದುಕೊಂಡಿರಿ. ಈ ವಿಶ್ವಾಸವು ಒಬ್ಬ ವ್ಯಕ್ತಿಯ ಹೃದಯದಲ್ಲಿ ಬೇರೂರುವ ಮತ್ತು ಅವನು ಅದನ್ನು ಹೃತ್ಪೂರ್ವಕವಾಗಿ ಅಂಗೀಕರಿಸುವವರೆಗೂ ಮುಸ್ಲಿಮನಾಗಲಾರ. ಅವನ ಹೆಸರು ಮುಸ್ಲಿಮರಂತಿದ್ದು, ಅವನು ಮುಸ್ಲಿಮ್ ಕುಟುಂಬದಲ್ಲಿ ಹುಟ್ಟಿದರೂ ಸರಿ ಎಂಬು ದನ್ನೂ ನೀವು ತಿಳಿದುಕೊಂಡಿರಿ. ಒಬ್ಬ ವ್ಯಕ್ತಿ ಮುಸ್ಲಿಮ್ ಆಗಲು 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬ ವಚನದ ಮೇಲೆ ಹೃತ್ಪೂರ್ವಕವಾಗಿ ವಿಶ್ವಾಸವಿರಿಸ ಬೇಕಾದುದು ಅತ್ಯಗತ್ಯ. ಈಗ ಇಸ್ಲಾಮಿನ ಅರ್ಥವನ್ನೂ ಪೂರ್ಣವಾಗಿ ತಿಳಿಯೋಣ. ಇಸ್ಲಾಮಿನ ಅರ್ಥ ಅಲ್ಲಾಹನ ಸಂಪೂರ್ಣ ಅನುಸರಣೆ ಎಂದಾಗಿದೆ. ಕುಫ್ರ್ ಎಂದರೆ ದೇವ ನಿಷೇಧ, ಕೃತಘ್ನತೆ ಮತ್ತು ಅವಿಧೇಯತೆಯಾಗಿದೆ. ಇಸ್ಲಾಮನ್ನು ಅಂಗೀಕರಿಸುವವರೂ ನಿರಾಕರಿಸುವವರೂ ಇಬ್ಬರೂ ಮನುಷ್ಯರೇ ಆಗಿದ್ದಾರೆ. ಇಬ್ಬರೂ ಅಲ್ಲಾಹನಿಂದ ಸೃಷ್ಟಿಸಲ್ಪಟ್ಟವರೇ ಆಗಿದ್ದಾರೆ. ಇಬ್ಬರೂ ಜನ್ಮತಃ ಅವನ ದಾಸರೇ ಆಗಿದ್ದಾರೆ. ಆದರೆ ಮೊದಲನೆಯವನು, ತನ್ನ ಒಡೆಯನನ್ನೂ ಸಂರಕ್ಷಕನನ್ನೂ ಅರಿತು ಆತನನ್ನು ತನ್ನ ಒಡೆಯನೆಂದೂ ಅಧಿಪತಿಯೆಂದೂ ಅಂಗೀಕರಿಸುತ್ತಾನೆ. ಅವನ ಆಜ್ಞೆಯಂತೆ ನಡೆಯುತ್ತಾನೆ. ಅವನ ಅನುಗ್ರಹಗಳಿಗೆ ಹಾರ್ದಿಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಾನೆ. ಆದ್ದರಿಂದ ಅವನು ಮುಸ್ಲಿಮ್ ಆಗಿದ್ದಾನೆ. ಅಲ್ಲಾಹನು ಅವನ ಬಗ್ಗೆ ಸಂತುಷ್ಟನಾಗಿರುತ್ತಾನೆ. ಮರಣಾನಂತರ ಅವನ ನೆಲೆಯು ಸ್ವರ್ಗವಾಗಿರುತ್ತದೆ. ಎರಡನೆಯವನು, ಒಂದೋ ತನ್ನ ಒಡೆಯನನ್ನು ಗುರುತಿಸುವುದೇ ಇಲ್ಲ. ಒಂದು ವೇಳೆ ಗುರುತಿಸಿದರೂ ತಪ್ಪಾಗಿ ಗುರುತಿಸುತ್ತಾನೆ. ಅವನೊಂದಿಗೆ ದೇವತ್ವದಲ್ಲಿ ಇತರ ರನ್ನು ಭಾಗೀದಾರರಾಗಿಸುತ್ತಾನೆ. ಅವನ ಆಜ್ಞೆಗಳನ್ನು ಬಿಟ್ಟು ತನ್ನ ಮನಸ್ಸಿಗೆ ಬಂದಂತೆ ವರ್ತಿಸುತ್ತಾನೆ ಅಥವಾ ತನ್ನಂತಹ ಇತರ ಮನುಷ್ಯರ ದಾಸ್ಯವನ್ನು ಸ್ವೀಕರಿಸುತ್ತಾನೆ. ತನ್ನ ನೈಜ ಒಡೆಯನ ಅನುಸರಣೆಯನ್ನು ತಿರಸ್ಕರಿಸುತ್ತಾನೆ ಮತ್ತು ಅವನು ನೀಡಿದ

ಕೊಡುಗೆಗಳನ್ನು ಅವನ ಅಭೀಷ್ಟಕ್ಕೆ ವಿರುದ್ಧ ಉಪಯೋಗಿಸಿ ಅವನಿಗೆ ಕೃತಘ್ನತೆ ತೋರಿಸುತ್ತಾನೆ. ಆದ್ದರಿಂದ ಅವನನ್ನು 'ಕಾಫಿರ್' ಎನ್ನಲಾಗುತ್ತದೆ. ಅಲ್ಲಾಹನು ಅವನಿಂದ ಅಸಂತುಷ್ಟನಾಗುತ್ತಾನೆ. ಮರಣಾನಂತರ ಅವನ ನೆಲೆ ನರಕ ವಾಗಿರುವುದು. ಇದುವೇ ಮನುಷ್ಯರನ್ನು ಮುಸ್ಲಿಮ್ ಮತ್ತು ಕಾಫಿರ್ ಆಗಿ ಬೇರ್ಪಡಿಸುವ ವಿಷಯವಾಗಿದೆ.

ಮುಸ್ಲಿಮ್ ಯಾರು?

ಈಗ ನಾವು ವಿಚಾರ ಮಾಡತಕ್ಕ ವಿಷಯವೊಂದಿದೆ. ಒಬ್ಬ ವ್ಯಕ್ತಿಯು ತನ್ನನ್ನು ಮುಸ್ಲಿಮ್ ಎಂದು ಹೇಳುತ್ತಿದ್ದಾನೆ. ಆದರೆ ಮುಸ್ಲಿಮ್ ಎಂದು ಯಾರಿಗೆ ಹೇಳ ಲಾಗುತ್ತದೆ ಎಂದು ಅವನಿಗೆ ತಿಳಿದಿಲ್ಲ. ಅವನ ಒಡೆಯನು ಅವನಿಂದ ಏನು ಬಯಸುತ್ತಾನೆ? ಅವನ ಅಭೀಷ್ಟವೇನು? ಅವನ ಒಡೆಯನ ಆದೇಶ ಏನಿದೆ ಎಂಬುದರ ಬಗ್ಗೆ ಅವನಿಗೆ ಚಿಂತೆಯೇ ಇಲ್ಲ. ಮುಸ್ಲಿಮ್ ಎಂಬ ನೆಲೆಯಲ್ಲಿ ಅವನು ಏನು ಮಾಡಬೇಕು, ಏನು ಮಾಡಬಾರದು ಎಂಬುದೂ ಅವನಿಗೆ ತಿಳಿದಿಲ್ಲ. ಹೀಗಿರುವಾಗ ಕೇವಲ ಹೆಸರು, ವೇಷಭೂಷಣ ಮತ್ತು ಅನ್ನ ಪಾನೀಯಗಳ ವ್ಯತ್ಯಾಸದ ಕಾರಣ ಅವನನ್ನು ಅಲ್ಲಾಹನ ವಿಧೇಯ ದಾಸನೆಂದು ಪರಿಗಣಿಸಲಾಗುವುದೇ? ಅಲ್ಲಾಹನು ಅವನಿಂದ ಸಂತುಷ್ಟನಾಗುವನೇ? ಪರಲೋಕದಲ್ಲಿ ಅವನನ್ನು ತನ್ನ ಅನುಗ್ರಹಗಳಿಗೆ ಅರ್ಹನೆಂದು ಪರಿಗಣಿಸುವನೇ? ಹೀಗಾಗಲು ಸಾಧ್ಯವಿಲ್ಲ ಎಂದು ನಿಮ್ಮ ಮನಸ್ಸೇ ಹೇಳುವುದು. ಅದುವೇ ನಿಜ. ಯಾವುದಾದರೊಂದು ವಿಶಿಷ್ಟ ಕುಲ, ಗೋತ್ರ ಅಥವಾ ಮನೆತನದಲ್ಲಿ ಹುಟ್ಟಿದ ಮಾತ್ರಕ್ಕೆ ಯಾವನೂ ಅಲ್ಲಾಹನ ದೃಷ್ಟಿಯಲ್ಲಿ ಶ್ರೇಷ್ಠನಾಗು ವುದಿಲ್ಲ. ಅಲ್ಲಾಹನ ದೃಷ್ಟಿಯಲ್ಲಿ ಅವನನ್ನು ಚೆನ್ನಾಗಿ ಅರಿತವನು, ಅವನ ಕ್ರೋಧದಿಂದ ರಕ್ಷಣೆ ಹೊಂದುವುದಕ್ಕಾಗಿ ಎಲ್ಲ ಪ್ರಯತ್ನಗಳನ್ನು ಮಾಡುವವನು ಹಾಗೂ ಅವನ ಆದೇಶಗಳನ್ನು ಪೂರ್ಣವಾಗಿ ಪಾಲಿಸಲು ಪ್ರಯತ್ನಿಸುವವನೇ ಶ್ರೇಷ್ಠನು. ಅವನು ಯಾರ ಮನೆಯಲ್ಲಿ ಹುಟ್ಟಿದವನಾದರೂ ಸರಿ. ಇಸ್ಲಾಮ್ ಧರ್ಮ ದಲ್ಲಿ ಯಾರನ್ನಾದರೂ ಹುಟ್ಟಿನ ಕಾರಣದಿಂದ ಕೀಳಾಗಿ ಕಾಣುವ ಪ್ರಮೇಯವೇ ಇಲ್ಲ. ಇಸ್ಲಾಮಿನ ದೃಷ್ಟಿಯಲ್ಲಿ ದೇವನನ್ನು ನಿರಾಕರಿಸುವವನು, ಅವನ ಆಜ್ಞೆಗಳನ್ನು ಉಲ್ಲಂಘಿಸುವವನು ಮತ್ತು ಅವನ ಮಾರ್ಗದರ್ಶನವನ್ನು ಬಿಟ್ಟು ಅನ್ಯ ಮಾರ್ಗಗಳಲ್ಲಿ ನಡೆಯುವವನು ನಿಕೃಷ್ಟನು.

ಮುಸ್ಲಿಮರ ಅವಸ್ಥೆ

ಇಂದು ಮುಸ್ಲಿಮರ ಅವಸ್ಥೆ ಏನು? ಜನಸಂಖ್ಯೆಯ ದೃಷ್ಟಿಯಿಂದ ಅವರದು ಬಹಳ ದೊಡ್ಡ ಸಮುದಾಯ. ಲೋಕದ ಅನೇಕ ದೇಶಗಳಲ್ಲಿ ಅವರ ಸರಕಾರಗಳೂ

ಇವೆ. ಆದರೆ ಅವರಿಗೆ ಇಂದು ಬೆಲೆ ಇಲ್ಲ. ನಿಜವಾಗಿ ಅವರ ಸ್ಥಾನಮಾನವು ಜಗತ್ತಿನ ಎಲ್ಲ ಜನಾಂಗಗಳು ಮತ್ತು ಸಮುದಾಯಗಳಿಂದ ಉನ್ನತವಾಗಿರಬೇಕಿತ್ತು. ಏಕೆಂದರೆ ಅವರು ಸರ್ವಶಕ್ತನೂ ಸರ್ವಾಧಿಪತಿಯೂ ಆದ ಅಲ್ಲಾಹನ ಮೇಲೆ ವಿಶ್ವಾಸವಿಡುವವರು. "ನೀವು ನೈಜ ಸತ್ಯವಿಶ್ವಾಸಿಗಳಾಗಿದ್ದರೆ ನೀವೇ ಉನ್ನತರಾಗಿರುವಿರಿ" ಎಂದು ಅವನು ವಾಗ್ದಾನವನ್ನು ಮಾಡಿರುವನು. ಆದರೆ ಇಲ್ಲಿ ನಾವು ಅನುಭವಿಸುತ್ತಿರುವ ಅವಸ್ಥೆ ಅದಕ್ಕಿಂತ ತೀರಾ ಭಿನ್ನವಾಗಿದೆ. ಇದಕ್ಕೆ ಕಾರಣವೇನೆಂದು ಯೋಚಿಸಿದ್ದೀರಾ? ಇದಕ್ಕೆ ಕೇವಲ ಒಂದು ಕಾರಣವಿರುವುದು ಸಾಧ್ಯ. ಯಾವ ಮುಸ್ಲಿಮನ ಶಿರವು ಅಲ್ಲಾಹನ ಹೊರತು ಇತರರ ಮುಂದೆ ಬಾಗಬಾರದಾಗಿತ್ತೋ ಅದು ಇಂದು ಎಲ್ಲೆಂದರಲ್ಲಿ ತನ್ನಂತಹ ಮನುಷ್ಯರ ಮುಂದೆ ಬಾಗುತ್ತಿದೆ. ಯಾವ ಮುಸ್ಲಿಮನ ಹೃದಯದಲ್ಲಿ ಅಲ್ಲಾಹನ ಹೊರತು ಇತರರ ಭಯ ಇರಬಾರದಿತ್ತೋ ಅದು ಇಂದು ನೂರಾರು ಭಯಗಳಿಂದ ತುಂಬಿ ಹೋಗಿದೆ. ಮುಸ್ಲಿಮನು ದೇವಾನುಗ್ರಹಗಳ ಬಳಕೆಯಲ್ಲಿ ಸ್ವೇಚ್ಛಾಚಾರದಿಂದ ದೂರವಿರಬೇಕಿತ್ತು. ಆದರೆ ಆತ ಇಂದು ದೇವಾನುಗ್ರಹಗಳನ್ನು ದೇವನ ಅಭೀಷ್ಟಕ್ಕೆದುರಾಗಿ ಬಳಸಲು ಸ್ವಲ್ಪವೂ ಅಳುಕುವುದಿಲ್ಲ. ಮುಸ್ಲಿಮನಿಗೆ ಜೀವನ ಸಾಗಿಸಲು ಅಲ್ಲಾಹನ ವತಿಯಿಂದ, ಅವನ ಅಂತಿಮ ಪ್ರವಾದಿಯ ಮೂಲಕ, ಕೇವಲ ಒಂದೇ ಮಾರ್ಗದರ್ಶನ ಮತ್ತು ಕಾನೂನು ಲಭಿಸಿತ್ತು. ಆದರೆ ಇಂದು ಅವನ ಜೀವನಕ್ಕೂ ಆ ಮಾರ್ಗದರ್ಶನ ಮತ್ತು ಕಾನೂನಿಗೂ ನಾಮ ಮಾತ್ರ ಸಂಬಂಧ ಉಳಿದುಕೊಂಡಿದೆ. ಅವನ ಜೀವನವು ಅನೇಕ ಶತಮಾನಗಳಿಂದ ದೇವೇತರ ಕಾನೂನು ಮತ್ತು ದೇವೇತರ ನಿಯಮಗಳ ಮೇಲೆ ನಡೆಯುತ್ತಿದೆ. ದೇವನ ಅಂತಿಮ ಗ್ರಂಥವು ಅವನ ಬಳಿ ಇದೆ. ಅದು ಅವತೀರ್ಣಗೊಂಡ ಮೂಲ ರೂಪದಲ್ಲೇ ಸುರಕ್ಷಿತವಾಗಿದೆ. ಆದರೆ ಮುಸ್ಲಿಮನು ಅದನ್ನು ಮೂಲೆ ಗುಂಪಾಗಿಸಿದ್ದಾನೆ. ಅದನ್ನು ಆತನು ಓದುತ್ತಿರುವನಾದರೂ ಅದನ್ನರ್ಥ ಮಾಡಿಕೊಳ್ಳುವ ಮತ್ತು ಅದರಂತೆ ನಡೆಯುವ ಪ್ರಯತ್ನವು ತೀರಾ ವಿರಳವಾಗಿದೆ. ಆದ್ದರಿಂದ ಆತನ ದೈನಂದಿನ ಜೀವನದಲ್ಲಿ ಅಲ್ಲಾಹನ ಗ್ರಂಥದ ಗಂಧಗಾಳಿಯೂ ಸೋಂಕುವುದಿಲ್ಲ. ಹೀಗಿರುವಾಗ ಅಲ್ಲಾಹನು ನೈಜ ಸತ್ಯ ವಿಶ್ವಾಸಿಗಳಿಗೆ ನಿರ್ಣಯಿಸಿದ ಆ ಉನ್ನತ ಸ್ಥಾನಮಾನ, ಗೌರವಾದರ ಮತ್ತು ಸಂಪ್ರೀತಿಯನ್ನು ಅವರು ಗಳಿಸುವುದಾದರೂ ಹೇಗೆ? ಮುಸ್ಲಿಮರು ಒಂದು ರೀತಿಯಲ್ಲಿ ಎಲ್ಲರಿಗಿಂತಲೂ ಅದೃಷ್ಟಶಾಲಿಗಳು. ಏಕೆಂದರೆ ಅವರ ಬಳಿ ಮಾತ್ರ ಇಂದು ಅಲ್ಲಾಹನ ವಾಣಿಯು ಅದರ ನೈಜ ರೂಪದಲ್ಲಿದೆ. ಇನ್ನೊಂದು ರೀತಿಯಲ್ಲಿ ಅವರು ಅತ್ಯಂತ ನತದೃಷ್ಟರು. ಏಕೆಂದರೆ ಅಲ್ಲಾಹನ ಗ್ರಂಥವನ್ನು ಹೊಂದಿಯೂ ಅವರು

ಅದರ ಅನುಗ್ರಹಗಳಿಂದ ವಂಚಿತರಾಗಿದ್ದಾರೆ. ಕುರ್‌ಆನ್ ಯಾಕಾಗಿ ಅವತೀರ್ಣ ಗೊಂಡಿದೆ? ಜನರು ಅದನ್ನು ಪಠಿಸಲಿಕ್ಕಾಗಿ, ಅರ್ಥಮಾಡಿಕೊಳ್ಳಲಿಕ್ಕಾಗಿ, ಅದನ್ನು ಆಚರಿಸಲಿಕ್ಕಾಗಿ ಮತ್ತು ಅದರ ಆದೇಶಗಳಂತೆ ಸಂಪೂರ್ಣ ಜೀವನ ಸಾಗಿಸಲಿಕ್ಕಾಗಿ ಅವತೀರ್ಣಗೊಂಡಿದೆ. ತನ್ಮೂಲಕ ಅವರು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸಂತೋಷ ಮತ್ತು ವಿಜಯವನ್ನು ಗಳಿಸಬಹುದಾಗಿತ್ತು. ಇಂದು ಜಗತ್ತಿನಾದ್ಯಂತ ಅಶಾಂತಿ ಇದೆ. ಎಲ್ಲೆಡೆಯೂ ಕೆಡುಕಿನದ್ದೇ ರಾಜ್ಯಭಾರ. ಸ್ವಾರ್ಥಹಿತಾಸಕ್ತಿ ಮತ್ತು ಅನ್ಯಾಯವು ಸರ್ವ ವ್ಯಾಪಕವಾಗಿದೆ. ಚಾರಿತ್ರ್ಯವು ಪತನ ವಾಗುತ್ತಿದೆ. ಮಾನವೀಯತೆಯು ರೋದಿಸುತ್ತಿದೆ. ಇದೆಲ್ಲವೂ ಮನುಷ್ಯನು ತನ್ನ ಸೃಷ್ಟಿಕರ್ತನನ್ನು ಮರೆತ ಕಾರಣಕ್ಕಾಗಿ. ಅವನ ಜೀವನವು ಅವನಿಂದಲೇ ರಚಿಸಲ್ಪಟ್ಟ, ಕುಂದುಕೊರತೆಗಳಿಂದ ತುಂಬಿ ತುಳುಕುವ, ತತ್ವಾದರ್ಶಗಳು ಮತ್ತು ಕಾನೂನುಗಳ ಮೇಲೆ ಸಾಗುತ್ತಿದೆ. ಅವು ಜೀವನವನ್ನು ಸುಧಾರಿಸುವ ಬದಲಾಗಿ ಇನ್ನಷ್ಟು ಗೊಂದಲಮಯ ಮತ್ತು ಅಶಾಂತವಾಗಿ ಮಾರ್ಪಡಿಸುತ್ತಿದೆ. ಇಂತಹ ಕುಂದುಕೊರತೆಗಳಿಲ್ಲದ, ಎಲ್ಲ ಮನುಷ್ಯರಿಗೂ ಒಳಿತೇ ಇರುವಂತಹ ಕಾನೂನು ನೀಡಬಲ್ಲವನು ಅಲ್ಲಾಹನು ಮಾತ್ರ. ಅವನೇ ಅವರ ಸೃಷ್ಟಿಕರ್ತ ಮತ್ತು ಪರಿಪಾಲಕ. ಅವನು ಅವರ ಒಳಿತು-ಕೆಡುಕುಗಳ ಸರಿಯಾದ ಜ್ಞಾನ ಹೊಂದಿದವನಾಗಿದ್ದಾನೆ. ಅವರ ಪ್ರಾಕೃತಿಕ ಕುಂದುಕೊರತೆಗಳನ್ನು, ಬಯಕೆ ಬೇಡಿಕೆಗಳನ್ನು ಅವನು ಸರಿಯಾಗಿ ಬಲ್ಲನು. ಅವನು ತನ್ನ ಈ ಕೊಡುಗೆಯಿಂದ ಎಂದೂ ಮನುಷ್ಯನನ್ನು ವಂಚಿಸಲಿಲ್ಲ. ಅವನ ಅದೇ ಕೊಡುಗೆಯು ನಮ್ಮ ಬಳಿ ಇಂದು 'ಇಸ್ಲಾಮ್'ನ ರೂಪದಲ್ಲಿ ಇದೆ. ಇಸ್ಲಾಮ್ ಜೀವನದ ದೈವಿಕ ವ್ಯವಸ್ಥೆಯಾಗಿದೆ. ಅದು ತನ್ನ ಯಥಾರ್ಥ ರೂಪದಲ್ಲಿ ಜಗತ್ತಿನಲ್ಲಿ ಜಾರಿಗೊಂಡಿದೆ. ಜಗತ್ತು ಅದನ್ನು ಅನುಭವಿಸಿದೆ. ಈ ವ್ಯವಸ್ಥೆಯು ತನ್ನ ನೈಜ ರೂಪದಲ್ಲಿ ಜಗತ್ತಿನಲ್ಲಿ ಜಾರಿಯಲ್ಲಿದ್ದಾಗ ಜಗತ್ತು ಪುಣ್ಯಗಳಿಂದಲೂ ಸುಖ ಸಂತೋಷಗಳಿಂದಲೂ ಸುಭಿಕ್ಷೆಯಿಂದಲೂ ತುಂಬಿ ತುಳುಕುತ್ತಿತ್ತು ಎಂಬುದಕ್ಕೆ ಇತಿಹಾಸ ಸಾಕ್ಷ್ಯ ವಹಿಸುತ್ತದೆ. ಆ ವ್ಯವಸ್ಥೆಯನ್ನು ಜಾರಿಗೊಳಿಸಿದವರು ಜಗತ್ತಿನ ಜನರ ಕಣ್ಮಣಿಯಾದರು. ಎಲ್ಲ ರೀತಿಯ ಗೌರವಾದರಗಳಿಗೆ ಅವರು ಪಾತ್ರರಾದರು. ಅವರು ಎಲ್ಲ ಜನಾಂಗಗಳ ನಾಯಕರಾಗಿ ನೇಮಿಸಲ್ಪಟ್ಟರು. ಇಸ್ಲಾಮ್ ಅಥವಾ ಇಸ್ಲಾಮೀ ವ್ಯವಸ್ಥೆ ಎಂಬ ಆ ದೈವಿಕ ಅನುಗ್ರಹ ಇಂದಿಗೂ ಇದೆ. ಆದರೆ ಇಂದು ಅದನ್ನು ಕಾರ್ಯರೂಪಕ್ಕೆ ತರಲಾಗುತ್ತಿಲ್ಲ. ಅದರ ಮೇಲೆ ವಿಶ್ವಾಸವಿಡುತ್ತೇವೆ ಎಂದು ವಾದಿಸುವವರು ಅದರಿಂದ ಮಾರ್ಗದರ್ಶನ ಪಡೆಯುತ್ತಿಲ್ಲ. ದೈವಿಕ ಗ್ರಂಥದ ಆಧಾರದಲ್ಲಿ ಅವರ ವಿಶ್ವಾಸ ಶ್ರದ್ಧೆ ಹೇಗಿರಬೇಕು, ಅವರ ನೀತಿ ನಡವಳಿಕೆ

ಹೇಗಿರಬೇಕು, ಸತ್ಯವೇನು, ಅಸತ್ಯವೇನು, ಯಾವ ವಸ್ತುವನ್ನು ಅವರು ಇಷ್ಟಪಡಬೇಕು, ಯಾವುದನ್ನು ಇಷ್ಟಪಡ ಬಾರದು, ಅವರಿಗೆ ಮಿತ್ರತ್ವ ಮತ್ತು ಶತ್ರುತ್ವದ ಬುನಾದಿ ಯಾವುದು, ಅವರ ಮೇಲೆ ಇರುವ ಇತರರ ಹಕ್ಕುಗಳು ಯಾವುವು, ಅವುಗಳನ್ನೂ ಹೇಗೆ ಪೂರೈಸಬೇಕು, ಅವರು ತಮ್ಮ ಕುಟುಂಬ ಜೀವನವನ್ನು ಹೇಗೆ ಸಾಗಿಸಬೇಕು, ವ್ಯಾಪಾರದಲ್ಲಿ ಯಾವ ಯಾವ ವಿಷಯ ಗಳನ್ನು ಗಮನಿಸಬೇಕು, ತಮ್ಮ ಸಾಮೂಹಿಕ ವ್ಯವಹಾರಗಳನ್ನು ಯಾವ ರೀತಿ ನಿರ್ವಹಿಸ ಬೇಕು, ಅವರಿಗೆ ಉನ್ನತಿ ಮತ್ತು ಪ್ರತಾಪ ಯಾವ ಕಾರ್ಯಗಳ ಮೂಲಕ ದೊರಕಬಹುದು, ಯಾವುದರ ಪರಿಣಾಮವಾಗಿ ಅವರಿಗೆ ನಿಂದ್ಯತೆ ಮತ್ತು ನಿರಾಶೆ ಬಂದೀತು ಎಂಬುದರ ಬಗ್ಗೆ ಅವರಿಗೆ ಕಿಂಚಿತ್ತೂ ಚಿಂತೆ ಇಲ್ಲ. ಮುಸ್ಲಿಮರೆಂಬ ನೆಲೆಯಲ್ಲಿ ಅವರು ಈ ಪ್ರಶ್ನೆಗಳನ್ನು ದೈವಿಕ ಗ್ರಂಥವಾದ ಕುರ್‌ಆನ್‌ನೊಂದಿಗೆ ಕೇಳಬೇಕಾಗಿತ್ತು ಮತ್ತು ಆ ಪ್ರಕಾರ ನಡೆಯಲು ಪ್ರಯತ್ನಿಸಬೇಕಾ ಗಿತ್ತು. ಆದರೆ ನಾವಿಂದು ಈ ವಿಷಯಗಳನ್ನು ಅನ್ಯರಲ್ಲಿ ಕೇಳುತ್ತಿದ್ದೇವೆ. ಎಲ್ಲಿಯ ತನಕ ಎಂದರೆ ದೇವಧಿಕ್ಕಾರಿಗಳ ಅನುಸರಣೆಗೂ ನಾವು ಹೇಸುವುದಿಲ್ಲ.

ಪರಿಣಾಮ

ಇದರ ಪರಿಣಾಮವಾಗಿಯೇ ದೇವನ ಈ ಅತಿದೊಡ್ಡ ಕೊಡುಗೆಯು ನಮ್ಮ ಬಳಿ ಇದ್ದೂ ನಾವು ಅದರ ಅನುಗ್ರಹಗಳಿಂದ ವಂಚಿತರಾಗಿದ್ದೇವೆ. ಆ ಪ್ರಕಾಶವನ್ನು ನಾವಿಂದು ಬಚ್ಚಿಟ್ಟಿದ್ದೇವೆ. ಸ್ವತಃ ನಾವೂ ಅದನ್ನು ಬಿಟ್ಟು ಅಂಧಕಾರಗಳಲ್ಲಿ ಅಲೆದಾಡುತ್ತಿದ್ದೇವೆ. ಅನ್ಯರಿಗೂ ನಾವು ಮಾರ್ಗದರ್ಶನ ಮಾಡುತ್ತಿಲ್ಲ. ಇದು ಅಲ್ಲಾಹನ ಗ್ರಂಥದ ಮೇಲೆ ನಾವು ಮಾಡುವ ಎಷ್ಟು ದೊಡ್ಡ ಅನ್ಯಾಯವೆಂಬುದನ್ನು ಯೋಚಿಸಿ ನೋಡಿರಿ. ಇಂದು ನಾವು ನಿಂದ್ಯತೆ ಮತ್ತು ನೀಚತೆಯಲ್ಲಿ ಬಿದ್ದಿರುವೆವಾದರೆ ಇದು ನಮ್ಮ ಈ ಅನ್ಯಾಯದ ಪ್ರತಿಫಲವಲ್ಲವೇ? ಹೌದು. ಖಂಡಿತ ಹೌದು. ಆದ್ದರಿಂದ ನಾವಿಂದು ಈ ಸಂಕಷ್ಟಗಳಿಂದ ಪಾರಾಗ ಬಯಸುವುದಾದರೆ ಅದಕ್ಕಿರುವ ಏಕೈಕ ಮಾರ್ಗ ಅಲ್ಲಾಹನ ಗ್ರಂಥ ಮತ್ತು ಆತನ ಧರ್ಮದ ಮೇಲೆ ಎಸಗುವ ಅನ್ಯಾಯವನ್ನು ಕೊನೆಗೊಳಿಸುವುದು ಮತ್ತು ಪೂರ್ಣ ಮನಸ್ಸಿನೊಂದಿಗೆ ಅದರ ಅನುಸರಣೆಯ ಹೊಣೆಯನ್ನು ನಿರ್ವಹಿಸಲು ಮುಂದೆ ಬರುವುದಾಗಿದೆ.

ಆದರೆ ಈ 'ಅನುಸರಣೆಯ ಹೊಣೆ' ನಿರ್ವಹಿಸುವುದರ ಅರ್ಥವನ್ನು ಅರಿತುಕೊಳ್ಳಿ. ಇಸ್ಲಾಮ್ ಎಂಬುದು ಇತರ ಅನೇಕ ಧರ್ಮಗಳಂತೆ ಕೇವಲ ಕೆಲವು ಆಚಾರ ಸಂಪ್ರದಾಯಗಳ ಮತ್ತು ಕೆಲವು ಆರಾಧನಾ ವಿಧಾನಗಳ ಹೆಸರಲ್ಲ. ಅದು ಮನುಷ್ಯನ ಸಂಪೂರ್ಣ ಜೀವನದ ಕುರಿತು ವ್ಯವಹರಿಸುವ ಧರ್ಮವಾಗಿದೆ. ಜೀವನದ ಪ್ರತಿಯೊಂದು

ವ್ಯವಹಾರದಲ್ಲಿಯೂ ಅದು ಮಾರ್ಗದರ್ಶನ ನೀಡುತ್ತದೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳನ್ನು ಒಮ್ಮೆ ನೋಡಿ. ಆಗ ನಿಮಗೆ, ಅವು ಒಂದೆಡೆ ಸರಿಯಾದ ವಿಶ್ವಾಸ ಶ್ರದ್ಧೆ ಹೇಗಿರಬೇಕು, ಅಲ್ಲಾಹನ ಆರಾಧನೆ ಹೇಗೆ ಮಾಡಬೇಕು, ಅವನ ಧ್ಯಾನ, ಸ್ತುತಿ ಸ್ತೋತ್ರಗಳಿಗೆ ಧರ್ಮದಲ್ಲಿ ಎಷ್ಟು ಪ್ರಾಮುಖ್ಯತೆ ಇದೆ ಎಂಬುದನ್ನು ವಿವರಿಸುವಾಗ ಇನ್ನೊಂದೆಡೆ ಮನುಷ್ಯನು ತನ್ನ ವೈಯಕ್ತಿಕ ಮತ್ತು ಕೌಟುಂಬಿಕ ಜೀವನವನ್ನು ಹೇಗೆ ಸಾಗಿಸಬೇಕು, ವ್ಯಾಪಾರದಲ್ಲಿ ಯಾವ ಮಿತಿ ಮೇರೆಗಳನ್ನು ಪಾಲಿಸಬೇಕು, ಅವನ ಸಂಬಂಧ, ಸಂಪರ್ಕಗಳು ಹೇಗಿರಬೇಕು, ಧನ ಸಂಪಾದಿಸುವ ಮತ್ತು ವ್ಯಯಿಸುವ ನಿಯಮ ನಿಬಂಧನೆಗಳಾವುವು, ಸರಕಾರದ ರಚನೆ ಮತ್ತು ನಿರ್ವಹಣೆ ಹೇಗಾಗಬೇಕು, ಶಾಂತಿ ಮತ್ತು ಯುದ್ಧದ ಬುನಾದಿಗಳೇನಾಗಿರಬೇಕು, ಎಂಬಿತ್ಯಾದಿ ವಿಷಯಗಳು ಸ್ಪಷ್ಟವಾಗಿ ಮನವರಿಕೆಯಾಗುವುದು. ಒಟ್ಟಿನಲ್ಲಿ ಮಾನವ ಜೀವನದ ವೈಯಕ್ತಿಕ ಮತ್ತು ಸಾಮೂಹಿಕವಾದ ಎಲ್ಲ ರಂಗಗಳಿಗೂ ಎಲ್ಲ ವ್ಯವಹಾರ ಗಳಿಗೂ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಆದೇಶಗಳಿವೆ. ಮಾತ್ರವಲ್ಲ ದೇವನ ಆಜ್ಞಾನುಸರಣೆಯ ಮತ್ತು ಆತನ ದಾಸ್ಯದ ಕರ್ತವ್ಯವನ್ನು ಪೂರೈಸಲು ಆ ಎಲ್ಲ ಆದೇಶಗಳ ಪಾಲನೆ ಮಾಡಬೇಕಾದುದು ಅಗತ್ಯ ಎಂಬ ತಾಕೀತಿನೊಂದಿಗೆ ಇದೆ. ಅವುಗಳ ಪೈಕಿ ಯಾವುದನ್ನೂ ಕಡೆಗಣಿಸುವಂತಿಲ್ಲ. ಒಂದು ವೇಳೆ ಹಾಗೆ ಮಾಡದೆ ತಿಳಿದೂ ತಿಳಿದೂ ಆ ಆದೇಶಗಳ ಪೈಕಿ ಕೆಲವನ್ನು ಕಡೆಗಣಿಸಿದರೆ ಅದು ಸತ್ಯವಿಶ್ವಾಸದ ಮಾರ್ಗವೆನಿಸದು. ಅದು ಅತ್ಯಂತ ಘೋರ ಪಾಪವೆನಿಸುವುದು. ಅದರ ಶಿಕ್ಷೆಯು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಬಹಳ ಕಠಿಣವಾಗಿರುವುದು. ಇಷ್ಟ ಬಂದ ಆದೇಶಗಳನ್ನು ಪಾಲಿಸುವುದು, ಉಳಿದವುಗಳನ್ನು ಬಿಟ್ಟು ಬಿಡುವುದು ಸತ್ಯವಿಶ್ವಾಸಿಗೆ ಭೂಷಣವಲ್ಲ. ಅವನ ಕ್ರಮವು ಕೇವಲ ಒಂದೇ ಆಗಿರಲು ಸಾಧ್ಯ. ಯಾವ ರೀತಿ ಅವನು ಸಂಪೂರ್ಣ ಕುರ್‌ಆನನ್ನು ಅಲ್ಲಾಹನಿಂದ ಅವತೀರ್ಣವಾದ ಗ್ರಂಥವೆಂದು ನಂಬುವನೋ ಅದೇ ರೀತಿ ಅದರಲ್ಲಿರುವ ಎಲ್ಲ ಆದೇಶಗಳೂ ಪಾಲಿಸಲಿಕ್ಕಾಗಿವೆ, ಕೇವಲ ಪಠಿಸಲಿಕ್ಕಾಗಿರುವುದಿಲ್ಲ ಎಂಬುದನ್ನೂ ನಂಬಬೇಕು. ಈ ಕ್ರಮವನ್ನು ಅನುಸರಿಸುವುದರಿಂದ ಮಾತ್ರ ಅಲ್ಲಾಹನ ದಾಸ್ಯ ಮತ್ತು ಅವನ ಅನುಸರಣೆಯ ಹಕ್ಕು ಪೂರ್ಣಗೊಳಿಸಿದಂತಾಗುವುದು. ಇದರಿಂದಲೇ ಮುಸ್ಲಿಮನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ತನ್ನ ಪ್ರಭುವಿನ ಅನುಗ್ರಹ ಗಳಿಗೆ ಪಾತ್ರನಾಗಬಲ್ಲನು.

❖ ❖ ❖ ❖

ಮುಸ್ಲಿಮ್

ಈ ತನಕದ ವಿವರಣೆಯಿಂದ ಒಂದು ವಿಷಯ ನಿಮಗೆ ಚೆನ್ನಾಗಿ ಮನದಟ್ಟಾಗಿರಬಹುದು. ಮುಸ್ಲಿಮ್ ಎಂದರೆ ಯಾವುದೇ ವಂಶ, ಕುಲ, ಗೋತ್ರ, ಮನೆತನ ಅಥವಾ ಕೋಮಿನ ಹೆಸರಲ್ಲ. ಮುಸ್ಲಿಮ್ ಎಂಬುದು ಒಂದು ವಿಶಿಷ್ಟ ವಿಶ್ವಾಸ-ಶ್ರದ್ಧೆ ಮತ್ತು ಜೀವನ ಕ್ರಮ ಹೊಂದಿದವನ ಹೆಸರು. ಆ ವಿಶ್ವಾಸ-ಶ್ರದ್ಧೆಯ ವಿವರಣೆಯನ್ನು ನೀವು ಈ ಹಿಂದೆ ತಿಳಿದಿರುವಿರಿ. ಆದರೆ ಆ ವಿಶಿಷ್ಟ ಜೀವನ ಕ್ರಮದ ವಿವರಣೆ ಮಾತ್ರ ಇನ್ನೂ ನಿಮ್ಮ ಮುಂದೆ ಬಂದಿಲ್ಲ. ಆದ್ದರಿಂದ ಈಗ ಅದನ್ನು ಸ್ಪಷ್ಟವಾಗಿ ತಿಳಿಯಲು ಪ್ರಯತ್ನಿಸೋಣ. ಒಬ್ಬ ಮುಸ್ಲಿಮನ ಜೀವನ ಕ್ರಮದಲ್ಲಿ ಅಗತ್ಯವಾಗಿ ಇರಲೇಬೇಕಾದ ವಿಷಯಗಳು ಯಾವುವು ಎಂಬುದನ್ನು ತಿಳಿಯೋಣ.

ದೇವನ ವಿಧೇಯತೆಯನ್ನು ನಿರಾಕರಿಸುವುದನ್ನು 'ಕುಫ್ರ್' ಎಂದೂ ದೇವನಿಗೆ ವಿಧೇಯನಾಗುವುದಕ್ಕೆ ಇಸ್ಲಾಮ್ ಎಂದೂ ಹೇಳುತ್ತಾರೆ ಎಂಬುದನ್ನು ನೀವು ಈಗಾಗಲೇ ತಿಳಿದಿರುವಿರಿ. ಇಸ್ಲಾಮಿನ ಅರ್ಥವೇ ಅಲ್ಲಾಹನ ಅನುಸರಣೆ ಮತ್ತು ಆಜ್ಞಾಪಾಲನೆ ಯಾಗಿದೆ. ಮನುಷ್ಯ ಅಲ್ಲಾಹನಿಂದ ಬಂದ ಮಾರ್ಗದರ್ಶನಕ್ಕೆ ವಿರುದ್ಧವಾದ ಎಲ್ಲ ಕ್ರಮ ಗಳನ್ನೂ ಕಾನೂನುಗಳನ್ನೂ ಆಜ್ಞೆಗಳನ್ನೂ ತಪ್ಪೆಂದೂ ವರ್ಜ್ಯವೆಂದೂ ಪರಿಗಣಿಸಬೇಕಾದುದು ಈ ಆಜ್ಞಾಪಾಲನೆಯ ಪ್ರಾಥಮಿಕ ಬೇಡಿಕೆ ಯಾಗಿದೆ. ಅಲ್ಲಾಹನ ಹೊರತು ಯಾರನ್ನೂ ಸ್ವತಂತ್ರ ಕಾನೂನು ನಿರ್ಮಾತೃ ಆಗಿ ಅಂಗೀಕರಿಸಬಾರದು. ಅಲ್ಲಾಹನ ಅನುಸರಣೆಗೆ ಅಧೀನವಲ್ಲದ ಎಲ್ಲ ರೀತಿಯ ಆದೇಶಗಳನ್ನೂ ನಿರಾಕರಿಸಬೇಕು. ಪವಿತ್ರ ಕುರ್‌ಆನ್ ಸ್ಪಷ್ಟವಾಗಿ ಸಾರಿ ಹೇಳುತ್ತದೆ.

"ಯಾರು ಅಲ್ಲಾಹನು ಅವತೀರ್ಣಗೊಳಿಸಿದ ಮಾರ್ಗದರ್ಶನದಂತೆ ತೀರ್ಮಾನ ಕೈಗೊಳ್ಳುವುದಿಲ್ಲವೋ ಅವರೇ ಕಾಫಿರ್ ಆಗಿರುತ್ತಾರೆ." **(ಪವಿತ್ರ ಕುರ್‌ಆನ್: 5: 44)**

ಜೀವನದಲ್ಲಿ ಯಾವ ಪ್ರಶ್ನೆ ನಿಮ್ಮ ಮುಂದೆ ಬಂದರೂ ಅದನ್ನು ಅಲ್ಲಾಹನ

ಮಾರ್ಗದರ್ಶನದಂತೆಯೇ ಪರಿಹರಿಸಬೇಕು ಎಂಬುದೇ ಇದರ ಸ್ಪಷ್ಟ ತಾತ್ಪರ್ಯ.

ಜೀವನದ ಎಲ್ಲ ವಿಷಯಗಳ ಬಗ್ಗೆಯೂ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆ ಏನು ಹೇಳುತ್ತದೆ ಎಂಬುದನ್ನು ನೋಡಿಕೊಳ್ಳುವುದು ಅಗತ್ಯ. ಯಾರು ಪ್ರತಿಯೊಂದು ವಿಷಯದಲ್ಲೂ ಹಾಗೆ ಮಾಡುವರೋ ಮತ್ತು ಅಲ್ಲಾಹನ ಗ್ರಂಥ ಹಾಗೂ ಪ್ರವಾದಿಚರ್ಯೆ ನಿರ್ದೇಶಿಸುವ ಕ್ರಮವನ್ನೇ ಅನುಸರಿಸುವರೋ ಅವರ ಕ್ರಮವೇ ಇಸ್ಲಾಮಿನ ಕ್ರಮವಾಗಿದೆ. ಮುಸ್ಲಿಮ್ ಆದವನು ಹಾಗೆಯೇ ಮಾಡ ಬೇಕು. ಆ ಕ್ರಮವನ್ನು ಬಿಟ್ಟು ತನ್ನ ಚಿತ್ತಕ್ಕೆ ಅನುಗುಣವಾದ ಕ್ರಮವನ್ನಾಗಲೀ ಪೂರ್ವಜರ ಅಂಧಾನುಕರಣೆಯ ಆಚಾರ-ಸಂಪ್ರದಾಯ ಗಳ ಕ್ರಮವನ್ನಾಗಲೀ ಮನುಷ್ಯನು ತನ್ನ ಅಲ್ಪಮತಿಯಿಂದ ಆವಿಷ್ಕರಿಸಿದ ಕ್ರಮವನ್ನಾಗಲೀ ಯಾರಾದರೂ ಅನುಸರಿಸಿದರೆ ಅದು ವಾಸ್ತವದಲ್ಲಿ ಕುಫ್ರ್‌ನ ಕ್ರಮವಾಗಿರುವುದು. ಒಬ್ಬ ಮುಸ್ಲಿಮ್ ಖಂಡಿತ ಆ ಕ್ರಮವನ್ನು ಕೈಗೊಳ್ಳಲಾರ.

ಮುಸ್ಲಿಮ್ ಎಂದು ಹೇಳುವುದೇ ಅಲ್ಲಾಹನ ಆಜ್ಞೆಯನ್ನು ಪಾಲಿಸುವವನಿಗೆ. ಮುಸ್ಲಿಮನು ಅಲ್ಲಾಹನ ಕಾನೂನಿಗೆ ವಿರುದ್ಧವಾಗಿ ತನ್ನ ಚಿತ್ತದ ಮಾತನ್ನು ಕೇಳಲಾರ. ತನ್ನ ಕುಲ-ಗೋತ್ರ ಅಥವಾ ಸಮುದಾಯದ ಇಚ್ಛೆಯನ್ನು ಪರಿಗಣಿಸಲಾರ ಮತ್ತು ಯಾವುದೇ ಶಕ್ತಿಯನ್ನಾಗಲೀ ಸರಕಾರವನ್ನಾಗಲೀ ಲೆಕ್ಕಿಸಲಾರ. ಏಕೆಂದರೆ ಅವನು ಕೇವಲ ಅಲ್ಲಾಹನ ದಾಸನು. ಅವನಿಗೆ ಆತನ ದಾಸ್ಯವನ್ನು ಮಾತ್ರ ಮಾಡಬೇಕಾಗಿದೆ. ಅವನು ಅನ್ಯರ ದಾಸನೂ ಅಲ್ಲ. ಅವನಿಗೆ ಅನ್ಯರ ದಾಸ್ಯ ಮಾಡಬೇಕಾಗಿಯೂ ಇಲ್ಲ. ಅಲ್ಲಾಹನು ಈ ರೀತಿ ಆದೇಶಿಸಿರುವನು:

"ಓ ಪೈಗಂಬರರೇ, ಹೇಳಿರಿ- 'ಓ ಗ್ರಂಥದವರೇ, ನಿಮ್ಮ ಮತ್ತು ನಮ್ಮೊಳಗೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ. ಅದೆಂದರೆ - ನಾವು ಅಲ್ಲಾಹನ ಹೊರತು ಇತರ ಯಾರದೇ ದಾಸ್ಯ-ಆರಾಧನೆ ಯನ್ನು ಮಾಡದಿರೋಣ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ ಪ್ರಭು ವಾಗಿರಿಸದಿರೋಣ.' ಈ ಕರೆಯನ್ನು ಸ್ವೀಕರಿಸಲು ಅವರು ಹಿಂಜರಿದರೆ, ನಾವಂತು ಮುಸ್ಲಿಮರು (ಕೇವಲ ಅಲ್ಲಾಹನ ದಾಸ್ಯ-ಆರಾಧನೆ ಮತ್ತು ದಾಸ್ಯ-ಅನುಸರಣೆ ಮಾಡುವವರು) ಎಂದು ಸ್ಪಷ್ಟವಾಗಿ ಹೇಳಿಬಿಡಿರಿ." **(ಪವಿತ್ರ ಕುರ್‌ಆನ್: 3: 64)**

"ಇವರೇನು ಅಲ್ಲಾಹನ ಧರ್ಮವನ್ನು ಅನುಸರಣಾ ರೀತಿ ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನನುಸರಿಸಲು ಇಷ್ಟಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ

ಆಜ್ಞಾಪಾಲಕಗಳಾಗಿ(ಮುಸ್ಲಿಮ್‌ಗಳಾಗಿ)ಯೇ ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ." (ಪವಿತ್ರ ಕುರ್‌ಆನ್: 3: 83)

ಇಬಾದತ್ ಎಂದರೇನು?

ಈ ಎರಡು ಸೂಕ್ತಗಳಲ್ಲಿ ಒಂದೇ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಅಂದರೆ ದೇವನ 'ಇಬಾದತ್' ಮಾತ್ರ ನೈಜ ಧರ್ಮವಾಗಿದೆ. ಇಬಾದತ್ ಎಂದರೆ ಕೇವಲ ಐದು ಹೊತ್ತು ಅವನ ಮುಂದೆ ಸಾಷ್ಟಾಂಗವೆರಗುವುದಲ್ಲ. ಅವನ 'ಇಬಾದತ್' ಎಂದರೆ ನಾವು ಅವನನ್ನು ಆರಾಧಿಸಲೂಬೇಕು ಮತ್ತು ಸಂಪೂರ್ಣ ಜೀವನದಲ್ಲಿ ಅವನ ಆಜ್ಞೆಗಳನ್ನು ಪಾಲಿಸಲೂ ಬೇಕು. ಯಾವುದನ್ನು ಅವನು ನಿಷೇಧಿಸಿರುವನೋ ಅದನ್ನು ಮಾಡಲೇಬಾರದು. ಯಾವ ಕಾರ್ಯವನ್ನು ಅವನು ಆಜ್ಞಾಪಿಸಿರುವನೋ ಅದನ್ನು ಕಡ್ಡಾಯವಾಗಿ ಮಾಡಬೇಕು. ಎಲ್ಲ ವಿಷಯಗಳಲ್ಲೂ ಸದಾ ದೇವನ ಆಜ್ಞೆ ಏನೆಂಬುದನ್ನು ನೋಡಬೇಕು. ಅವನ ಆಜ್ಞೆ ಏನೆಂದು ತಿಳಿದ ಬಳಿಕ ನಮ್ಮ ಮನಸ್ಸು ಮತ್ತು ಬುದ್ಧಿ ಏನು ಹೇಳುತ್ತದೆ, ಆ ಸಾಹೇಬರು ಏನು ಹೇಳುತ್ತಾರೆ, ನಮ್ಮ ತಂದೆ ತಾತಂದಿರು ಏನು ಮಾಡುತ್ತಿದ್ದರು, ಈಗ ನಮಗೆ ಯಾವುದು ಇಷ್ಟ, ಈ ವಿಷಯದಲ್ಲಿ ಇತರರ ಅಭಿಪ್ರಾಯವೇನು, ಎಂಬಿತ್ಯಾದಿಗಳನ್ನು ಪರಿಗಣಿಸಲೇಬಾರದು. ಏಕೆಂದರೆ ಅಲ್ಲಾಹನ ಆಜ್ಞೆಯನ್ನು ಕೈಬಿಟ್ಟು ಇತರರ ಮಾತು ಕೇಳಿದರೆ ದೇವತ್ವದಲ್ಲಿ ಅವರನ್ನು ಭಾಗೀದಾರರನ್ನಾಗಿಸಿದಂತಾಗುವುದು ಮತ್ತು ಅಲ್ಲಾಹನ ಸ್ಥಾನಮಾನವನ್ನು ಸ್ವಲ್ಪ ಮಟ್ಟಿಗಾದರೂ ಅವರಿಗೆ ನೀಡಿದಂತಾಗುವುದು. ಇದು ಅತ್ಯಂತ ಅಪಾಯಕಾರೀ ವಿಷಯ. ಇದರಿಂದ ಮನುಷ್ಯ ನೇರವಾಗಿ ವಿನಾಶಕೂಪಕ್ಕೆ ಬೀಳುವನು.

ಮೂರು ವಿಘ್ನಗಳು

ಮನುಷ್ಯನನ್ನು ಅಲ್ಲಾಹನ ದಾಸ್ಯ-ಅನುಸರಣೆಯಿಂದ ತಡೆಯುವಂತಹ ಮತ್ತು ಅಂಧಕಾರದಲ್ಲಿ ಸಿಲುಕಿಸುವಂತಹ ಮೂರು ದೊಡ್ಡ ವಿಷಯಗಳಿವೆ. ಮುಸ್ಲಿಮನಾಗಿದ್ದು ದೇವಾನುಸರಣೆಯಲ್ಲಿ ಜೀವಿಸ ಬಯಸುವವನು ಈ ಮೂರೂ ವಿಷಯಗಳನ್ನು ಚೆನ್ನಾಗಿ ಅರಿತು ಅವುಗಳ ಬಗ್ಗೆ ಎಚ್ಚರಿಕೆಯಿಂದಿರಬೇಕಾದುದು ಅತ್ಯಗತ್ಯ. ಅವು ಹೀಗಿವೆ:

1. ಸ್ವೇಚ್ಛಾನುಸರಣೆ.
2. ಪೂರ್ವಜರ ಮತ್ತು ಸ್ವಸಮುದಾಯದ ಅಂಧಾನುಸರಣೆ.
3. ಧನಬಲ ಅಧಿಕಾರ ಬಲದಿಂದ ಜಗತ್ತಿನ ನೇತೃತ್ವ ವಹಿಸಿದವರ ಅನುಸರಣೆ.

ಸ್ವೇಚ್ಛಾನುಸರಣೆಯ ಬಗ್ಗೆ ಅಲ್ಲಾಹನು ಈ ರೀತಿ ಹೇಳಿರುವನು: "ದೇವ

ಮಾರ್ಗದರ್ಶನದ ಹೊರತು ಕೇವಲ ತನ್ನ ಸ್ವೇಚ್ಛೆಗಳನ್ನು ಅನುಸರಿಸುವವನಿಗಿಂತ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಅಲ್ಲಾಹನು ಇಂತಹ ಅಕ್ರಮಿಗಳಿಗೆ ಎಷ್ಟು ಮಾತ್ರಕ್ಕೂ ಸನ್ಮಾರ್ಗದರ್ಶನ ನೀಡುವುದಿಲ್ಲ." **(ಪವಿತ್ರ ಕುರ್‌ಆನ್: 28: 50)**

"ತನ್ನ ಚಿತ್ತಾಕಾಂಕ್ಷೆಯನ್ನು ತನ್ನ ದೇವನಾಗಿ ಮಾಡಿಕೊಂಡಿರುವಾತನ ಸ್ಥಿತಿಯ ಬಗ್ಗೆ ನೀವೆಂದಾದರೂ ವಿವೇಚಿಸಿದಿರಾ? ನೀವು ಇಂತಹವರನ್ನು ಸರಿದಾರಿಗೆ ತರುವ ಹೊಣೆಯನ್ನು ವಹಿಸಿಕೊಳ್ಳಬಲ್ಲಿರಾ? ಇವರಲ್ಲಿ ಹೆಚ್ಚಿನವರು ಆಲಿಸುತ್ತಾರೆಂದೂ ಗ್ರಹಿಸುತ್ತಾರೆಂದೂ ಭಾವಿಸುತ್ತೀರಾ? ಇವರಂತು ಪ್ರಾಣಿಗಳಂತಿದ್ದಾರೆ. ಅಲ್ಲ, ಅದಕ್ಕಿಂತಲೂ ನಿಕೃಷ್ಟರು." **(ಪವಿತ್ರ ಕುರ್‌ಆನ್: 25: 43-44)**

ತನ್ನ ಚಿತ್ತದ ಬೇಡಿಕೆಯನ್ನು ಹಿಂಬಾಲಿಸುವವನು ಅದನ್ನೇ ತನ್ನ ದೇವನನ್ನಾಗಿರಿಸಿ ಕೊಳ್ಳುತ್ತಾನೆ ಎಂದು ಈ ಸೂಕ್ತಗಳು ತಿಳಿಸುತ್ತವೆ. ತನ್ನ ಚಿತ್ತದ ದಾಸನಾದ ಬಳಿಕ ದೇವನ ದಾಸನಾಗಿ ಉಳಿಯುವುದು ಸಾಧ್ಯವಿಲ್ಲವೆಂಬುದು ಸುವ್ಯಕ್ತ. ಇಂತಹ ವ್ಯಕ್ತಿ ತನಗೆ ಸಂಪತ್ತು ಹೇಗೆ ದೊರಕೀತು, ಗೌರವ ಮತ್ತು ಮರ್ಯಾದೆ ಹೇಗೆ ಪಡೆಯಬಹುದು, ಹೆಸರು ಖ್ಯಾತಿ, ಸುಖ-ಸಮೃದ್ಧಿ ಹೇಗೆ ಲಭಿಸೀತೆಂದು ನಿತ್ಯವೂ ಲೆಕ್ಕ ಹಾಕುತ್ತಿರುತ್ತಾನೆ. ಇವು ತನಗೆ ದೊರಕೀತೆಂದು ಆತನಿಗೆ ಅನಿಸಿದಾಗ ಆತ ಯಾವ ಕೆಲಸಕ್ಕೂ ಹೇಸುವು ದಿಲ್ಲ. ಅದನ್ನು ದೇವನು ಎಷ್ಟು ಉಗ್ರವಾಗಿ ನಿಷೇಧಿಸಿದ್ದರೂ ಸರಿಯೇ. ಇದೇ ರೀತಿ ಯಾವ ಕಾರ್ಯಗಳಿಂದ ಆತನ ಬೇಡಿಕೆಗಳು ಈಡೇರಲಾರದೋ ಅದನ್ನು ಆತ ಎಂದೂ ಮಾಡಲಾರ. ಆ ಬಗ್ಗೆ ದೇವನ ಕಟ್ಟಾಜ್ಞೆ ಇದ್ದರೂ ಸರಿಯೆ. ಇಂತಹ ವ್ಯಕ್ತಿಯ ಕುರಿತು ಆತನು ತನ್ನ ಚಿತ್ತವನ್ನೇ ದೇವನಾಗಿಸಿಕೊಂಡಿದ್ದಾನೆಂದಲ್ಲದೆ ಇನ್ನೇನೆನ್ನಬೇಕು?

ಪೂರ್ವಜರ ಮತ್ತು ಸ್ವಸಮುದಾಯದ ಅನುಸರಣೆಯ ಸ್ಥಿತಿಯೂ ಇದೇ ಆಗಿದೆ. ತಮ್ಮ ಪೂರ್ವಜರು ಹೀಗೆ ಮಾಡುತ್ತಿದ್ದರೆಂದು ಹೇಳುತ್ತಾ ಅದನ್ನೇ ಚಾಚೂ ತಪ್ಪದೆ ಅನುಸರಿಸುತ್ತಾ ಬರುವ ಬಹಳಷ್ಟು ಜನರನ್ನು ನೀವು ಕಂಡಿರಬಹುದು. ಅವರು ಎಂದೂ ಯಾವುದು ಸರಿ, ಯಾವುದು ತಪ್ಪು, ಎಂದು ಯೋಚಿಸುವುದಿಲ್ಲ. ಅವರಿಗೆ ತಮ್ಮ ಪೂರ್ವಜರು ಹಾಗೆ ಮಾಡುತ್ತಿದ್ದರು ಎಂಬ ಒಂದೇ ಕಾರಣ ಸಾಕು. ಇಂತಹ ಜನರ ಮುಂದೆ ಅವರ ಪೂರ್ವಜರ ರೀತಿ ರಿವಾಜುಗಳಿಗೆ ವಿರೋಧವಾಗಿ ಅಲ್ಲಾಹನ ಆಜ್ಞೆಗಳು ಬಂದರೆ ಅದನ್ನು ಅವರು ಬಿಟ್ಟು ಬಿಡುತ್ತಾರೆ ಮತ್ತು ನಾವು ನಮ್ಮ ಪೂರ್ವಜರು ಮಾಡುತ್ತಾ ಬಂದುದನ್ನೇ ಮಾಡುತ್ತೇವೆಂದು ಹೇಳುತ್ತಾರೆ. ಇಂತಹ ವ್ಯಕ್ತಿಯನ್ನು ದೇವನ ದಾಸ ಎಂದು ತಿಳಿಯಲು ಯಾವ ಕಾರಣವೂ ಇಲ್ಲ.

ಆತನಾದರೋ ತನ್ನ ಪೂರ್ವಜರ ಮತ್ತು ಮನೆತನದ ದಾಸನಾಗಿದ್ದಾನೆಯೇ ಹೊರತು ದೇವನ ದಾಸನಲ್ಲ. ಆದರಿಂದಲೇ ಅಲ್ಲಾಹನು ಇಂತಹ ಜನರ ಬಗ್ಗೆ ಈ ರೀತಿ ಹೇಳಿರುವನು: "ಅಲ್ಲಾಹನು ಅವತೀರ್ಣಗೊಳಿಸಿದ ನಿರ್ದೇಶಗಳನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ, 'ನಾವು ನಮ್ಮ ಪೂರ್ವಿಕರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೆವೋ ಅದನ್ನೇ ಅನುಸರಿಸುವೆವು' ಎನ್ನುತ್ತಾರೆ. ಸರಿ, ಅವರ ಪೂರ್ವಿಕರು ತಮ್ಮ ಬುದ್ಧಿಶಕ್ತಿಯನ್ನೇನೂ ಉಪಯೋಗಿಸದೆ ಸತ್ಯಮಾರ್ಗದಿಂದ ವಂಚಿತರಾಗಿದ್ದರೆ ಆಗಲೂ ಇವರು ಅವರನ್ನನುಸರಿಸುತ್ತಲೇ ಇರುವರೇ?"

(ಪವಿತ್ರ ಕುರ್‌ಆನ್: 2: 170)

"ಅಲ್ಲಾಹನು ಅವತೀರ್ಣಗೊಳಿಸಿದ ಶಾಸನದ ಕಡೆಗೂ ಆತನ ಸಂದೇಶವಾಹಕರ ಕಡೆಗೂ ಬನ್ನಿರಿ ಎಂದು ಅವರೊಡನೆ ಹೇಳಲಾದಾಗ ಅವರು, 'ನಾವು ನಮ್ಮ ಪೂರ್ವಿಕರನ್ನು ಯಾವ ಮಾರ್ಗದಲ್ಲಿ ಕಂಡಿದ್ದೆವೋ ಅದೇ ನಮಗೆ ಸಾಕು' ಎಂದು ಹೇಳುತ್ತಾರೆ. ಪೂರ್ವಿಕರು ಏನೂ ಅರಿತಿರದಿದ್ದರೂ ಮತ್ತು ಅವರಿಗೆ ಸನ್ಮಾರ್ಗದ ಅರಿವೇ ಇಲ್ಲದಿದ್ದರೂ ಇವರು ಅವರನ್ನೇ ಅನುಕರಿಸುತ್ತಲಿರುವರೇ?" **(ಪವಿತ್ರ ಕುರ್‌ಆನ್: 5: 104)**

ತಮ್ಮ ಪೂರ್ವಜರ ಈ ಅಂಧಾನುಸರಣೆಯಲ್ಲೇ ಎಲ್ಲ ಕಾಲದ ಅಜ್ಞಾನಿಗಳು ಸಿಲುಕಿದ್ದರು. ಇದುವೇ ಮನುಷ್ಯರನ್ನು ದೇವಸಂದೇಶವಾಹಕರ ಮಾರ್ಗದರ್ಶನದಿಂದ ವಂಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪವಿತ್ರ ಕುರ್‌ಆನಿನಲ್ಲಿ ಪೂರ್ವ ಪ್ರವಾದಿಗಳ ವೃತ್ತಾಂತವನ್ನು ತಿಳಿಸಿರುವಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ಪ್ರವಾದಿಯ ಜನಾಂಗವೂ ತನ್ನ ಪ್ರವಾದಿಯ ಸಂದೇಶವನ್ನು ಧಿಕ್ಕರಿಸುತ್ತಾ ನಮ್ಮ ಪೂರ್ವಜರ ರೀತಿ ರಿವಾಜುಗಳಿಗೆ ಸಂಪೂರ್ಣ ವಿರುದ್ಧವಾಗಿರುವ ನಿಮ್ಮ ಮಾತನ್ನು ನಾವು ಹೇಗೆ ನಂಬಬೇಕು ಎಂಬ ಮಾತನ್ನೇ ಹೇಳುತ್ತಿದ್ದರು. ಇದಕ್ಕುತ್ತರವಾಗಿ ದಾಸ್ಯ ಮತ್ತು ಗುಲಾಮಗಿರಿಯು ಓರ್ವನಿಗೆ ಮೀಸಲಾಗಿರಲು ಸಾಧ್ಯ. ಒಂದೇ ದೇವನ ದಾಸ್ಯ ಕೈಗೊಳ್ಳಿರಿ. ಇಲ್ಲವೇ ಪೂರ್ವಜರ ದಾಸ್ಯ ಮಾಡುತ್ತಲಿರಿ. ಉಭಯತ್ರರ ದಾಸ್ಯವನ್ನು ಒಟ್ಟಿಗೆ ನಿರ್ವಹಿಸಲು ಸಾಧ್ಯವಿಲ್ಲ. ಈಗ ಯೋಚಿಸಿರಿ ದಾಸ್ಯಕ್ಕೆ ಅರ್ಹನು ಯಾರು, ದೇವನೋ ಅಥವಾ ನಿಮ್ಮ ಹಿರಿಯರೋ, ಅವರು ನಿಮ್ಮಂತೆ ದೇವನಿಂದಲೇ ಸೃಷ್ಟಿಸಲ್ಪಟ್ಟವರು. ನೀವು ನೇರ ಮಾರ್ಗದಲ್ಲಿ ನಡೆಯಲು ಇಚ್ಛಿಸುವಿರಾದರೆ ಎಲ್ಲವನ್ನೂ ಬಿಟ್ಟು ದೇವನ ಕಡೆಯಿಂದ ಪ್ರವಾದಿಗಳ ಮೂಲಕ ಬಂದ ಸಂದೇಶಕ್ಕೆ ಓಗೊಡಿರಿ ಎಂದು ಹೇಳಲಾಗಿದೆ.

ಧಾರ್ಮಿಕ ಮುಖಂಡರ ಹಾಗೂ ಧನ ಮತ್ತು ಅಧಿಕಾರದ ಬಲದಿಂದ ಜಗತ್ತಿನ ನೇತೃತ್ವ ವಹಿಸಿರುವವರ ಅನುಸರಣೆಯು ಸನ್ಮಾರ್ಗದ ಮೂರನೆಯ ಮಹಾ ವಿಘ್ನವಾಗಿದೆ.

ಬಹಳಷ್ಟು ಜನರು ಆತ ಬಹಳ ದೊಡ್ಡ ವ್ಯಕ್ತಿ, ಅವರ ಮಾತು ನಿಜವಾಗಿರಬಹುದು, ಆ ವ್ಯಕ್ತಿ ದೊಡ್ಡ ಶ್ರೀಮಂತ ಮತ್ತು ಉತ್ತಮ ಸ್ಥಾನಮಾನ ಉಳ್ಳವನು ಅವನನ್ನು ಒಪ್ಪಲೇಬೇಕು. ಇಲ್ಲವಾದರೆ ಲೋಕದ ಕಾರ್ಯ ನಡೆಯದು. ಆ ವ್ಯಕ್ತಿ ದೇಹಬಲ ಮತ್ತು ಅಧಿಕಾರದ ಬಲ ಉಳ್ಳವನು ಅವನ ಮಾತನ್ನು ಕೇಳದಿದ್ದರೆ ನನಗೆ ಹಾನಿ ಇದೆ. ಆತ ದೇವತಾ ಮನುಷ್ಯ; ಆತನ ಆಜ್ಞೆಯನ್ನು ಕೇಳದಿದ್ದರೆ ಅವರ ಶಾಪದಿಂದ ನಾಶ ಹೊಂದುವೆವು. ಆ ಸಮುದಾಯವು ಬಹಳ ಅಭಿವೃದ್ಧಿ ಹೊಂದುತ್ತಿದೆ. ಅವರ ರೀತಿ-ರಿವಾಜನ್ನು ನಾವು ಅನುಸರಿಸದಿದ್ದರೆ ನಾವು ಹಿಂದುಳಿದವರಾಗುವೆವು ಎಂದು ತಿಳಿಯುತ್ತಾರೆ. ಓರ್ವ ವ್ಯಕ್ತಿ ಈ ರೀತಿ ಆಲೋಚಿಸ ತೊಡಗಿದಂದಿನಿಂದ ಆತನಿಗೆ ಸನ್ಮಾರ್ಗದ ದ್ವಾರವು ಮುಚ್ಚುತ್ತದೆ. ಆತ ದೇವನ ದಾಸ್ಯದೆಡೆಗೆ ಬರಲು ಸಾಧ್ಯವೇ ಇಲ್ಲ. ಅಲ್ಲಾಹನೇ ಹೇಳಿರುವಂತೆ: "ಓ ಪೈಗಂಬರರೇ, ನೀವು ಭೂ ನಿವಾಸಿಗಳಲ್ಲಿ ಹೆಚ್ಚಿನವರ ಹೇಳಿಕೆಯಂತೆ ನಡೆದರೆ ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿ ಬಿಡುವರು." **(ಪವಿತ್ರ ಕುರ್‌ಆನ್: 6: 116)**

ಈಗ ವಿವರಿಸಿದ ಈ ಮೂರೂ ವಿಘ್ನಗಳು ಇರುವ ತನಕ ಮಾನವನು ಸತ್ಪಥದತ್ತ ಸುಳಿಯಲಾರ. ಆದ್ದರಿಂದ ಸತ್ಪಥವನ್ನು ಗಳಿಸಲು ಮತ್ತು ಅದರಲ್ಲಿ ಸರಿಯಾಗಿ ನೆಲೆಗೊಳ್ಳಲು ಮಾನವನ ಮನಸ್ಸು ಈ ಮೂರು ರೋಗಗಳಿಂದ ದೂರವಿರಬೇಕು. ನೇರ ಮಾರ್ಗವು ಕೇವಲ ಒಂದೇ ಆಗಿದೆ. ಅದೇನೆಂದರೆ ಮಾನವನು ದೇವನ ಹೊರತು ಯಾರ ದಾಸನೂ, ದೇವಸಂದೇಶವಾಹಕರ ಹೊರತು ಇತರರನ್ನು ನಿಶ್ಶರ್ತವಾಗಿ ಅನುಸರಿಸುವವನೂ ಆಗಿರಬಾರದು. ಅಲ್ಲಾಹ್ ಮತ್ತು ಆತನ ಪ್ರವಾದಿಯು ಏನೆಲ್ಲಾ ತಿಳಿಸಿರುವರೋ ಅದೇ ಸತ್ಯವಾಗಿದೆ ಮತ್ತು ಅದಕ್ಕೆ ವಿರುದ್ಧವಾದುದೆಲ್ಲವೂ ಮಿಥ್ಯವಾಗಿದೆ. ಆತನಿಗೆ ಗೌರವ ಮತ್ತು ಔನ್ನತ್ಯ ಸಿಗುವುದಾದರೆ ಅದು ಕೇವಲ ದೇವನ ಮತ್ತು ಆತನ ಪ್ರವಾದಿಯ ಅನುಸರಣೆಯಿಂದ ಮಾತ್ರ. ಜೀವನದ ಯಾವುದೇ ವ್ಯವಹಾರದಲ್ಲಿ ಆತ ಇದರ ಹೊರತು ಬೇರೆ ಯಾವುದಾದರೂ ದಾರಿಯನ್ನು ಅವಲಂಬಿಸಿದರೆ ಅದು ಅವನ ಇಹಲೋಕದ ಕೇಡಿಗೆ ಮತ್ತು ಪರಲೋಕದ ವಿನಾಶಕ್ಕೆ ಕಾರಣವಾಗುವುದು. ಯಾವುದೇ ವಿಷಯದಲ್ಲಿ ದೇವನ ಆಜ್ಞೆಯೇನೆಂದು ತಿಳಿದಾಕ್ಷಣ ಮುಸ್ಲಿಮನು ಅದರ ಎದುರು ತಲೆಬಾಗುತ್ತಾನೆ. ದೇವಾಜ್ಞೆಯನ್ನು ತಿಳಿದ ಬಳಿಕ ಅದರ ವಿರುದ್ಧ ಯೋಚಿಸುವುದೇ ಇಲ್ಲ. ಲೋಕವು ಅದನ್ನು ಎಷ್ಟೇ ಕೆಡುಕೆಂದು ಪರಿಗಣಿಸಿದರೂ ಸರಿಯೆ, ತನ್ನವರು ಮತ್ತು ಪರಕೀಯರು ಏನೇ ಹೇಳಲಿ, ಹಿರಿಯರು ಆ ಬಗ್ಗೆ ಎಷ್ಟೇ ಕೋಪಗೊಳ್ಳಲಿ ಎಲ್ಲರಿಗೂ ಆತ ನೀಡುವ

ಉತ್ತರವು ಒಂದೇ ಆಗಿರುವುದು. "ನಾನು ಕೇವಲ ದೇವನ ದಾಸನಾಗಿರುವೆನು, ಸ್ವೇಚ್ಛೆಯ, ಪೂರ್ವಜರ, ಸರದಾರನ, ಗುರುವಿನ, ನಾಯಕನ ಅಥವಾ ಅರಸನ ದಾಸನಲ್ಲ" ಸನ್ಮಾರ್ಗ ಮತ್ತು ದುರ್ಮಾರ್ಗ ದೇವನ ನೈಜ ದಾಸ್ಯ ಮತ್ತು ಕಪಟ ದಾಸ್ಯದ ವ್ಯತ್ಯಾಸವನ್ನು ಮತ್ತು ಅವುಗಳ ತಾತ್ಪರ್ಯವನ್ನು ಗ್ರಹಿಸಲು ಈ ಕೆಳಗಿನ ಕುರ್‌ಆನ್ ಸೂಕ್ತಗಳನ್ನು ಪಠಿಸಿರಿ.

"ನಾವು ಸುವ್ಯಕ್ತ ವಾಸ್ತವಿಕತೆಯನ್ನು ತಿಳಿಸುವಂತಹ ಸೂಕ್ತಗಳನ್ನು ಅವತೀರ್ಣ ಗೊಳಿಸಿದ್ದೇವೆ. ಮುಂದೆ ನೇರ ಮಾರ್ಗದ ಕಡೆಗೆ ಅಲ್ಲಾಹನೇ ತಾನಿಚ್ಛಿಸಿದವರಿಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದೆವೆಂದೂ ನಾವು ಅನುಸರಣೆಯನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ. ಆದರೆ ಅನಂತರ ಅವರಲ್ಲೊಂದು ವಿಭಾಗವು (ಅನುಸರಣೆಯಿಂದ) ವಿಮುಖವಾಗಿ ಬಿಡುತ್ತದೆ. ಇಂತಹವರು ಖಂಡಿತ ಸತ್ಯವಿಶ್ವಾಸಿಗಳಲ್ಲ. ಅವರ ನಡುವಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಅವರನ್ನು ಅಲ್ಲಾಹ್ ಮತ್ತು ಅವನ ಸಂದೇಶ ವಾಹಕರ ಕಡೆಗೆ ಕರೆಯಲಾದಾಗ ಅವರಲ್ಲೊಂದು ವಿಭಾಗವು ಹಿಂಜರಿಯುತ್ತದೆ. ಆದರೆ ಸತ್ಯವು ಅವರ ಪರವಾಗಿದ್ದರೆ ಅತ್ಯಂತ ವಿಧೇಯರಾಗಿ ರಸೂಲರ ಬಳಿಗೆ ಬಂದು ಬಿಡು ತ್ತಾರೆ. ಇವರ ಹೃದಯಗಳಿಗೆ (ಕಪಟವಿಶ್ವಾಸದ) ರೋಗ ತಗಲಿದೆಯೇ? ಅಥವಾ ಇವರು ಸಂಶಯಗ್ರಸ್ತರಾಗಿರುವರೇ? ಅಥವಾ ಅವರಿಗೆ ಅಲ್ಲಾಹ್ ಮತ್ತು ರಸೂಲರು ಅವರ ಮೇಲೆ ಅನ್ಯಾಯ ಮಾಡುವರೆಂಬ ಭಯವಿದೆಯೇ? ವಾಸ್ತವದಲ್ಲಿ ಅಕ್ರಮಿಗಳಂತೂ ಅವರೇ ಆಗಿರುತ್ತಾರೆ. ಅವರ ಮೊಕದ್ದಮೆಯ ಬಗ್ಗೆ ತೀರ್ಪು ನೀಡುವಂತಾಗಲು ಅವ ರನ್ನು ಅಲ್ಲಾಹ್ ಮತ್ತು ರಸೂಲರ ಕಡೆಗೆ ಕರೆಯಲಾದಾಗ, ನಾವು ಆಲಿಸಿದೆವು ಮತ್ತು ಅನುಸರಿಸಿದೆವು ಎಂದು ಹೇಳುವುದೇ ಸತ್ಯವಿಶ್ವಾಸಿಗಳ ಕರ್ತವ್ಯವಾಗಿರುತ್ತದೆ. ಇಂತಹವರೇ ಯಶಸ್ವಿಗಳಾಗುವವರು. ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲನೆ ಮಾಡುವವರು, ಅಲ್ಲಾಹನನ್ನು ಭಯಪಡುವವರು ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರು ವವರೇ ವಿಜಯಿಗಳು." **(ಪವಿತ್ರ ಕುರ್‌ಆನ್: 24: 46-52)**

ಇದುವೇ ಸತ್ಯವಿಶ್ವಾಸಿಯ ನೈಜ ರೂಪ. ಮುಸ್ಲಿಮನೆಂದರೆ ತನ್ನನ್ನು ದೇವಗ್ರಂಥ ಮತ್ತು ಅವನ ಪ್ರವಾದಿಯ ಅನುಸರಣೆಗೆ ಮುಡಿಪಾಗಿಟ್ಟವನು. ಅಲ್ಲಿಂದ ದೊರೆತ ಎಲ್ಲ ಆಜ್ಞೆಗಳನ್ನು ಶಿರಸಾ ಪಾಲಿಸುವವನು. ಅದಕ್ಕೆ ವಿರುದ್ಧವಾಗಿ ಸ್ವೇಚ್ಛೆಯನ್ನು, ಸಂಬಂಧಿಕರನ್ನು, ಲೋಕದ ಜನರನ್ನು ಅನುಸರಿಸದವನು ಎಂದು ಇದರಿಂದ ತಿಳಿಯಿತು. ಇದುವೇ ಮುಸ್ಲಿಮ್ ಮತ್ತು ಮುಅ್‌ಮಿನನ (ಸತ್ಯವಿಶ್ವಾಸಿಯ) ವಿಶೇಷತೆಯಾಗಿದೆ.

ಮುಸ್ಲಿಮನ ಕರ್ತವ್ಯ

ಇಸ್ಲಾಮ್ ಎಂದರೆ ಏನು ಮತ್ತು ಮುಸ್ಲಿಮ್ ಎಂದರೆ ಯಾರು ಎಂಬುದನ್ನು ನಾವು ತಿಳಿದೆವು. ಈಗ ಮುಸ್ಲಿಮನಾಗುವುದರ ವ್ಯಾವಹಾರಿಕ ಬೇಡಿಕೆಗಳೇನೆಂಬುದನ್ನು ತಿಳಿಯೋಣ. "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್‍ರಸೂಲುಲ್ಲಾಹ್" ಎಂಬ ವಚನದ ಮೇಲಿನ ವಿಶ್ವಾಸ ಮಾನವನ ಮೇಲೆ ಯಾವ್ಯಾವ ಕರ್ತವ್ಯಗಳನ್ನು ಹೇರುತ್ತದೆ, ಅಲ್ಲಾಹನ ಆರಾಧನೆ, ಅನುಸರಣೆ ಮತ್ತು ದಾಸ್ಯದ ಪ್ರತಿಜ್ಞೆ ಕೈಗೊಂಡವರ ಜೀವನವು ಹೇಗಿರಬೇಕು ಎಂಬೀ ಪ್ರಶ್ನೆಗಳ ಉತ್ತರವು ಹಿಂದಿನ ವಿವರಣೆಯಲ್ಲೇ ಇದೆ. ಅದೇನೆಂದರೆ ಅಲ್ಲಾಹ್ ಮತ್ತು ಪ್ರವಾದಿಯ ಆಜ್ಞೆಗಳನ್ನು ಸಂಪೂರ್ಣವಾಗಿ ಅನುಸರಿಸಬೇಕು. ಅಂದರೆ ಆತನ ಸಂಪೂರ್ಣ ಜೀವನವು ಕುರ್‌ಆನ್ ಮತ್ತು ಪ್ರವಾದಿಚರ್ಯೆಗಳಿಗನುಸಾರವಾಗಿರಬೇಕು. ಈ ಪ್ರಶ್ನೆಯ ಇನ್ನುಳಿದ ಉತ್ತರವು ಹೀಗಿದೆ: ತನ್ನ ಜೀವನವನ್ನು ದೇವಾಜ್ಞೆಗಳಿಗೆ ವಿಧೇಯವಾಗಿರಿಸುವುದು ಮಾತ್ರ ಮುಸ್ಲಿಮನ ಕರ್ತವ್ಯವಲ್ಲ. ಆತನ ಮೇಲೆ ಇನ್ನೊಂದು ಮಹತ್ತರವಾದ ಹೊಣೆಯನ್ನು ಹೇರಲಾಗಿದೆ. ಅದನ್ನು ನಿರ್ವಹಿಸದೆ ಆತ ಮುಸ್ಲಿಮ ನಾಗುವುದರ ಬೇಡಿಕೆಯನ್ನು ಪೂರೈಸಲಾರ. ಇದನ್ನು ನಿರ್ಲಕ್ಷಿಸಿದಲ್ಲಿ ಆತನ ಇಹ-ಪರ ಗಳೆರಡೂ ಅಪಾಯಕ್ಕೊಳಗಾಗುವುವು. ಈ ಕರ್ತವ್ಯ ಏನು ಎಂಬ ಬಗ್ಗೆ ಅಲ್ಲಾಹನ ಈ ಆದೇಶಗಳನ್ನು ಗಮನಿಸಿರಿ.

"ಇದೇ ರೀತಿ ನೀವು ಜಗತ್ತಿನ ಮಾನವರ ಬಗ್ಗೆ ಸಾಕ್ಷಿಯಾಗಲಿಕ್ಕಾಗಿಯೂ ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಯಾಗಲಿಕ್ಕಾಗಿಯೂ ನಿಮ್ಮನ್ನು ಒಂದು ಸುಮಧ್ಯ ಸಮುದಾಯವನ್ನಾಗಿ ಮಾಡಿದ್ದೇವೆ." **(ಪವಿತ್ರ ಕುರ್‌ಆನ್: 2: 143)**

ಮುಸ್ಲಿಮರದ್ದು ಲೋಕದ ಇತರ ಜನಾಂಗಗಳಿಗಿಂತ ಭಿನ್ನವಾದ ಒಂದು ಸಮುದಾಯವಾಗಿದೆ. ಅವರನ್ನು ಅಲ್ಲಾಹನು ಎಲ್ಲ ಜನರ ಮುಂದೆ ಅಲ್ಲಾಹನ ಧರ್ಮದ ಸಾಕ್ಷ್ಯ ವಹಿಸಬೇಕೆಂಬ ಉದ್ದೇಶಕ್ಕಾಗಿ ಒಂದು 'ಉಮ್ಮತ್' (ಸಮುದಾಯ) ಆಗಿ ನೇಮಿಸಿರುತ್ತಾನೆ. ಆ ಸಾಕ್ಷ್ಯವು ಪ್ರವಾದಿ(ಸ) ಅವರು ತಮ್ಮ ಕಾಲದ ಜನರ

ಮುಂದೆ ನೀಡಿದ ರೀತಿಯಲ್ಲಾಗಿರಬೇಕು. ಅಂದರೆ ಈ ಸಾಕ್ಷ್ಯದಿಂದ ಅಲ್ಲಾಹನ ಧರ್ಮವು ಎಲ್ಲಾ ಜನರ ಮೇಲೆ ಪೂರ್ಣವಾಗಿ ಸಾಕ್ಷಾತ್ಕಾರಗೊಳ್ಳಬೇಕು. ನಿರ್ಣಾಯಕ ದಿನದಂದು ಅಲ್ಲಾಹನ ನ್ಯಾಯಾಲಯದಲ್ಲಿ ನಮಗೆ ಈ ಧರ್ಮದ ಸುಳಿವೇ ಸಿಕ್ಕಿರಲಿಲ್ಲ, ಆದ್ದರಿಂದ ನಾವು ಅದನ್ನ ಅನುಸರಿಸಲಾರದೆ ಹೋದೆವು ಎಂಬ ನೆಪ ಅಥವಾ ದೂರನ್ನು ಯಾರೂ ಕೊಡುವಂತಾಗಬಾರದು ಎಂಬುದು ಈ ಸೂಕ್ತದಿಂದ ವ್ಯಕ್ತವಾಯಿತು.

ಅಲ್ಲಾಹನು ಈ ಸಮುದಾಯದ ಮೇಲೆ ಹೇರಿರುವ ಕರ್ತವ್ಯವು ಬಹಳ ಶ್ರೇಷ್ಠವೂ ಪ್ರಾಮುಖ್ಯವೂ ಆಗಿದೆ. ಇದರ ಪ್ರಾಮುಖ್ಯತೆಯನ್ನು ತಿಳಿಯಲು ಲೋಕಕ್ಕೆ ಪ್ರವಾದಿಗಳ ಆಗಮನ ಮತ್ತು ಅವರ ಮೂಲಕ ಕಳುಹಿಸಲ್ಪಡುವ ದೈವಿಕ ಮಾರ್ಗದರ್ಶನದ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ತಿಳಿಯಬೇಕಾಗಿದೆ. ಜಗತ್ತಿನಲ್ಲಿರುವ ಎಲ್ಲಾ ಜನರೂ ಇನ್ನು ನಿರ್ಣಾಯಕ ದಿನದ ವರೆಗೆ ಹುಟ್ಟಲಿರುವ ಎಲ್ಲ ಮಾನವರೂ ಪುನರುತ್ಥಾನ ದಿನದಂದು ದೇವನ ಮುಂದೆ ಹಾಜರಾಗುವರು. ನೀವು ಜಗತ್ತಿನಲ್ಲಿ ಏನು ಮಾಡಿ ಬಂದಿರುವಿರಿ, ಎಂದು ಅವರಲ್ಲಿ ಪ್ರತಿಯೊಬ್ಬನನ್ನು ಕೇಳಲಾಗುವುದು. ಆ ಸಂದರ್ಭ ಬರಲಿಕ್ಕಿದೆ ಮತ್ತು ತನ್ನ ವಿಚಾರಣೆ ನಡೆಯಲಿದೆ ಎಂಬುದರ ಕುರಿತು ಪರಿವೆಯೇ ಇಲ್ಲದೆ ಲೋಕದಲ್ಲಿ ದೇವನ ಅಭೀಷ್ಟಕ್ಕೆದುರಾಗಿ ಜೀವನ ಸಾಗಿಸಿದ ಜನರಿಗೆ ಅದು ಬಹಳ ಕೆಟ್ಟ ಮತ್ತು ಭೀಕರ ಘಳಿಗೆಯಾಗಿರುವುದೆಂಬ ಮಾತನ್ನು ಎಲ್ಲಾ ದೈವಿಕ ಗ್ರಂಥಗಳು ಸ್ಪಷ್ಟಪಡಿಸಿವೆ. ಆದಿ ಕಾಲದಿಂದಲೂ ಅದೇ ದುರ್ದಿನದ ಮತ್ತು ಭೀಕರವಾದ ಘಳಿಗೆಯ ಬಗ್ಗೆ ಮತ್ತು ಅದರ ದುಷ್ಪರಿಣಾಮದ ಬಗ್ಗೆ ತಿಳಿಸಲು ದೇವನು ತನ್ನ ಪ್ರವಾದಿಗಳನ್ನು ಮತ್ತು ಗ್ರಂಥಗಳನ್ನು ಕಳುಹಿಸುತ್ತಾ ಬಂದಿರುವನು. ಪ್ರಥಮ ಪ್ರವಾದಿ ಆದಮ್(ಅ) ಅವರನ್ನು ಆತನು ತನ್ನ ಸಂದೇಶವಾಹರನ್ನಾಗಿ ಮಾಡಿ ತನಗೆ ಯಾವುದು ಇಷ್ಟ ಮತ್ತು ಯಾವುದು ಇಷ್ಟವಲ್ಲ ಎಂಬುದನ್ನು ಸರಿಯಾಗಿ ತಿಳಿಸಿಕೊಟ್ಟನು. ತದನಂತರ ತನ್ನ ಪ್ರವಾದಿಗಳನ್ನು ನಿರಂತರವಾಗಿ ಕಳುಹಿಸುತ್ತಾ ಬಂದನು. ಅವರ ಸೃಷ್ಟಿಕರ್ತನ ಇಷ್ಟ ಏನು, ಆತನಿಗಿಷ್ಟವಾದ ಜೀವನದ ನೈಜ ವಿಧಾನ ಯಾವುದು, ಅವರು ಏನು ಮಾಡಬೇಕು, ಏನು ಮಾಡಬಾರದು, ಪರಲೋಕ ಮೋಕ್ಷ ಮತ್ತು ಅಲ್ಲಾಹನ ಸಂಪ್ರೀತಿ ಹೇಗೆ ಗಳಿಸಬಹುದು, ಎಂದು ಸುಸ್ಪಷ್ಟವಾಗಿ ತಿಳಿಸಿದರು. ದೇವನಿಗಿಷ್ಟವಾದ ಮತ್ತು ಇಷ್ಟವಲ್ಲದ ಕಾರ್ಯಗಳನ್ನು ಸಂಪೂರ್ಣವಾಗಿ ತಿಳಿಸುವ ಕರ್ತವ್ಯವು ಸಂದೇಶವಾಹಕರದ್ದಾದರೆ ಅವರ ಮೇಲೆ ವಿಶ್ವಾಸವಿಟ್ಟು ಅವರನ್ನು ಅನುಸರಿಸುವುದು ಎಲ್ಲಾ ಜನರ ಹೊಣೆಯಾಗಿದ್ದಿತು. ಅವರವರ ಜವಾಬ್ದಾರಿಯ

ನಿರ್ವಹಣೆ ಕುರಿತು ಉಭಯತರಲ್ಲೂ ಪ್ರಶ್ನಿಸಲಾಗುವುದೆಂದು ಕುರ್‌ಆನ್ ಸಾರುತ್ತದೆ. ನಿಮ್ಮ ಕರ್ತವ್ಯವನ್ನು ಹೇಗೆ ನಿರ್ವಹಿಸಿದಿರಿ, ಅಲ್ಲಾಹನ ಆಜ್ಞೆಗಳನ್ನು ಸರಿಯಾಗಿ ಜನರಿಗೆ ತಿಳಿಸಿದಿರೋ ಇಲ್ಲವೋ, ಎಂದು ಸಂದೇಶವಾಹಕರನ್ನು ಪ್ರಶ್ನಿಸಿದರೆ, ನೀವು ನಮ್ಮ ಈ ಸಂದೇಶವಾಹಕರ ಸಂದೇಶಕ್ಕೆ ಯಾವ ರೀತಿ ಪ್ರತಿಕ್ರಿಯಿಸಿದಿರೆಂದು ಜನರನ್ನು ಕೇಳಲಾಗುವುದು.

"ಆದ್ದರಿಂದ ನಾವು ಯಾರ ಕಡೆಗೆ ಸಂದೇಶವಾಹಕರನ್ನು ಕಳುಹಿಸಿದ್ದೆವೋ ಅವರನ್ನೆಲ್ಲಾ ವಿಚಾರಣೆ ನಡೆಸಿಯೇ ತೀರುವೆವು ಮತ್ತು (ಸಂದೇಶವಾಹಕರು ದೌತ್ಯದ ಕರ್ತವ್ಯವನ್ನು ಎಷ್ಟರ ಮಟ್ಟಿಗೆ ನೆರವೇರಿಸಿದ್ದರು ಮತ್ತು ಅವರಿಗೆ ಏನು ಪ್ರತಿಕ್ರಿಯೆ ದೊರಕಿತೆಂದು) ಸಂದೇಶವಾಹಕರೊಡನೆಯೂ ನಾವು ಪ್ರಶ್ನಿಸುವೆವು."

(ಪವಿತ್ರ ಕುರ್‌ಆನ್: 7: 6)

ಈ ಕಾರಣದಿಂದಾಗಿಯೇ ಸಂದೇಶವಾಹಕರು ತಮ್ಮ ಜವಾಬ್ದಾರಿಕೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತಾ ಜನರಿಗೆ ಸಂದೇಶವನ್ನು ಮುಟ್ಟಿಸಿದರು. ಅದರಲ್ಲಿ ಅವರು ಯಾವ ಕೊರತೆಯನ್ನೂ ಮಾಡಲಿಲ್ಲ. ಇದೇ ಹೊಣೆಗಾರಿಕೆಯನ್ನು ಅಂತಿಮ ಪ್ರವಾದಿ ಮುಹಮ್ಮದ್‌ರವರ(ಸ) ಮೇಲೂ ಹೇರಲಾಗಿತ್ತು. ಅವರು ಅದನ್ನು ಪರಿಪೂರ್ಣ ವಾಗಿ ನಿರ್ವಹಿಸಿದರು. ಅಂತಲೇ ಕೊನೆಯ 'ಹಜ್ಜ್'ನ ಸಂದರ್ಭದಲ್ಲಿ ಅವರು 'ಅರಫಾತ್' ಮೈದಾನದಲ್ಲಿ ನೆರೆದಿದ್ದ ಜನಸ್ತೋಮದೊಡನೆ ಹೀಗೆ ಪ್ರಶ್ನಿಸಿದರು, "ಜನರೇ, ನಾನು ನಿಮಗೆ ಸತ್ಯವನ್ನು ಮುಟ್ಟಿಸಿದ್ದೇನೋ, ಇಲ್ಲವೊ?" ಆಗ ಅಲ್ಲಿ ನೆರೆದಿದ್ದ ಜನರು ಒಕ್ಕೊರಳಿನಿಂದ "ತಾವು ನಿಜವಾಗಿಯೂ ಅಲ್ಲಾಹನ ಧರ್ಮವನ್ನು ನಮಗೆ ತಲುಪಿಸಿದ್ದೀರಿ" ಎಂದು ಹೇಳಿದಾಗ ಪ್ರವಾದಿವರ್ಯರು(ಸ) ಆಕಾಶದತ್ತ ಬೆರಳೆತ್ತಿ ತೋರಿಸುತ್ತಾ, "ದೇವಾ! ನಿನ್ನ ಧರ್ಮವನ್ನು ನಿನ್ನ ದಾಸರಿಗೆ ಪರಿಪೂರ್ಣವಾಗಿ ತಲುಪಿಸಿರುವುದಕ್ಕೆ ನೀನೇ ಸಾಕ್ಷಿಯಾಗಿರು" ಎಂದರು ಮತ್ತು ಜನರೊಡನೆ "ನಾನು ನಿಮಗೆ ಏನೆಲ್ಲಾ ತಲುಪಿಸಿ ರುವೆನೋ ಅದನ್ನು ನೀವು ಇತರರಿಗೆ ತಲುಪಿಸಿರಿ" ಎಂದು ತಾಕೀತು ಮಾಡಿದರು.

ಸತ್ಯದ ಸಾಕ್ಷ್ಯ

ಮುಸ್ಲಿಮ್ ಜನಾಂಗವು ಪ್ರಳಯ ಕಾಲದವರೆಗೂ ನಿರ್ವಹಿಸಬೇಕಾದ ಸತ್ಯದ ಸಾಕ್ಷ್ಯ ಇದುವೇ ಆಗಿದೆ. ಆದ್ದರಿಂದ ಮುಸ್ಲಿಮನ ಮುಖ್ಯ ಕರ್ತವ್ಯವು ತನಗೆ ದೊರೆತ ದೇವಧರ್ಮ ಮತ್ತು ಪ್ರವಾದಿ(ಸ) ಅವರ ಮಾರ್ಗದರ್ಶನವನ್ನು ಇತರರಿಗೆ ತಲುಪಿಸುತ್ತಿರು ವುದಾಗಿದೆ. ಅಲ್ಲಾಹನ ಧರ್ಮವನ್ನು ಪ್ರವಾದಿಗಳು ಆತನಿಗೆ ತಲುಪಿಸಿರುವಂತೆ

ಅದನ್ನು ಆತನು ಸಂಪೂರ್ಣವಾಗಿ ಇತರರಿಗೆ ತಲುಪಿಸುತ್ತಿರಬೇಕು. ಇದೇ ಅಲ್ಲಾಹನ ಧರ್ಮದ ಸಾಕ್ಷಿಯಾಗಿರುವುದರ ತಾತ್ಪರ್ಯ.

ಸತ್ಯದ ಸಾಕ್ಷ್ಯವೆಂಬ ಈ ಕಡ್ಡಾಯ ಕರ್ತವ್ಯವನ್ನು ನಿರ್ವಹಿಸಲು ಎರಡು ವಿಷಯಗಳು ಅತ್ಯಗತ್ಯವಾಗಿದೆ.

1. ಅಲ್ಲಾಹನ ಗ್ರಂಥ ಮತ್ತು ಪ್ರವಾದಿವರ್ಯರ(ಸ) ಚರ್ಯೆಯ ಮೂಲಕ ನಮಗೆ ದೊರಕಿರುವುದನ್ನು ನಾವು ನಮ್ಮ ನಾಲಗೆಯ ಮೂಲಕ ಅಥವಾ ಲೇಖನಿಯ ಮೂಲಕ ಲೋಕದ ಸಮಕ್ಷಮ ಬಹಿರಂಗಗೊಳಿಸುವುದು. ಈ ಕಾರ್ಯಕ್ಕಾಗಿ ಈ ಲೋಕದಲ್ಲಿ ಲಭ್ಯವಿರುವ ಎಲ್ಲ ಧರ್ಮಸಮ್ಮತ ಮಾಧ್ಯಮಗಳನ್ನು ಬಳಸುವುದು ಅವಶ್ಯ. ತನ್ಮೂಲಕ ಧರ್ಮದ ಸಂಪೂರ್ಣ ಶಿಕ್ಷಣವು ಲೋಕದ ಮುಂದೆ ಬರಬೇಕು. ಅಲ್ಲಾಹನ ಈ ಧರ್ಮವೇ ಸತ್ಯಧರ್ಮವಾಗಿದೆ, ಅದುವೇ ಅವರ ಜೀವನದ ಎಲ್ಲ ಸಮಸ್ಯೆಗಳಿಗೂ ಸೂಕ್ತ ಪರಿಹಾರ ನೀಡಬಲ್ಲುದು. ಅದರಿಂದಲೇ ಪರಲೋಕದಲ್ಲಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸಾಧ್ಯ ಎಂದು ಅವರಿಗೆ ಮನವರಿಕೆಯಾಗಬೇಕು.

2. ಎರಡನೇ ಕಾರ್ಯವು ಕೃತಿಯ ಸಾಕ್ಷ್ಯವಾಗಿದೆ. ಅರ್ಥಾತ್ ನಾವು ಸತ್ಯವೆಂದು ತಿಳಿಯುವ ಎಲ್ಲಾ ಶಿಕ್ಷಣವನ್ನು ನಮ್ಮ ಜೀವನದಲ್ಲೂ ಮೈಗೂಡಿಸಿಕೊಳ್ಳಬೇಕು. ನಮ್ಮ ಜೀವನ, ನಡವಳಿಕೆ, ರೀತಿ-ನೀತಿ, ಸಂಪರ್ಕ, ವ್ಯವಹಾರ, ನಮ್ಮ ಲೇವಾದೇವಿ ಎಲ್ಲವೂ ಅಲ್ಲಾಹನ ಧರ್ಮದ ವ್ಯಾವಹಾರಿಕ ಮಾದರಿಯಾಗಿರಬೇಕು. ಲೋಕವು ಇಸ್ಲಾಮನ್ನು ನಮ್ಮ ಭಾಷಣ ಮತ್ತು ಲೇಖನದಿಂದ ಮಾತ್ರವಲ್ಲ, ನಮ್ಮ ಕೃತಿ-ಕರ್ಮಗಳಿಂದಲೂ ತಿಳಿಯಬೇಕಾಗಿದೆ. ಈ ಧರ್ಮವನ್ನು ಸ್ವೀಕರಿಸುವುದರಿಂದ ಎಂತಹ ಉತ್ತಮ ಮನುಷ್ಯರು ರೂಪ ತಾಳುತ್ತಾರೆ. ಎಂತಹ ಪರಿಶುದ್ಧ ಹಾಗೂ ಶಿಷ್ಟ ಸಮಾಜ ಅಸ್ತಿತ್ವಕ್ಕೆ ಬರುತ್ತದೆ. ವಿದ್ಯೆ-ಜ್ಞಾನಗಳಲ್ಲಿ, ಸಾಹಿತ್ಯ-ಕಲೆಗಳಲ್ಲಿ ಎಂತಹ ರಚನಾತ್ಮಕ ಪ್ರಗತಿಯಾಗುತ್ತದೆ. ಪ್ರೇಮ ಸಹಾನುಭೂತಿಯ ಎಂತಹ ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತದೆ. ಒಳಿತು ಮತ್ತು ಶಿಷ್ಟಾಚಾರಗಳ ಅಭಿವೃದ್ಧಿ ಮತ್ತು ಕೆಡುಕಿನ ಅಧೋಗತಿ ಹೇಗಾಗುತ್ತದೆ ಎಂಬುದನ್ನು ಅವರು ತಮ್ಮ ಕಣ್ಣುಗಳಿಂದಲೇ ನೋಡಿ ತಿಳಿದುಕೊಳ್ಳುವಂತಾಗಬೇಕು. ಈ ರೀತಿ ಇಸ್ಲಾಮಿನ ಸತ್ಯತೆಯು ಸುಲಭದಲ್ಲಿ ನಿಷೇಧಿಸಲಾಗದಂತೆ ರೂಪು ಗೊಳ್ಳುವುದು.

ಮಾತು ಮತ್ತು ಲೇಖನಿಯ ಸಾಕ್ಷ್ಯದ ಜೊತೆಗೆ ಕೃತಿಯ ಸಾಕ್ಷ್ಯವೂ ನೆರವೇರಿಸಲ್ಪಟ್ಟಾಗ ಮುಸ್ಲಿಮ್ ಸಮುದಾಯದ ಮೇಲೆ ಹೊರಿಸಲಾದ ಸತ್ಯದ

ಸಾಕ್ಷ್ಯದ ಜವಾಬ್ದಾರಿಯು ಪೂರ್ಣಗೊಂಡಂತಾಗುವುದು. ಆಗಲೇ ಅವರು ಕರ್ತವ್ಯ ಮುಕ್ತರಾಗುವರು. ತರುವಾಯ ಈ ಸತ್ಯವನ್ನು ಒಪ್ಪದೆ ಯಾರು ಮಿಥ್ಯದಲ್ಲೇ ಅಚಲರಾಗಿರುವರೋ ಅವರು ತಮ್ಮ ವ್ಯವಹಾರಕ್ಕೆ ತಾವೇ ಜವಾಬ್ದಾರರಾಗುವರು. ಮುಸ್ಲಿಮ್ ಸಮುದಾಯದ ಮೇಲೆ ಇದರ ಯಾವುದೇ ಜವಾಬ್ದಾರಿಯಿಲ್ಲ. ನಿರ್ಣಾಯಕ ದಿನದಂದು ಅವರು, "ನಾವು ನಮಗೆಷ್ಟು ತಲುಪಿಸಲು ಸಾಧ್ಯವಿತ್ತೋ ಅದೆಲ್ಲವನ್ನೂ ಅವರಿಗೆ ತಲುಪಿಸಿದೆವು. ಅವರು ಅದನ್ನು ಸ್ವೀಕರಿಸದೇ ಹೋದರೆ ತಪ್ಪು ಅವರದೇ ಹೊರತು ನಮ್ಮದಲ್ಲ" ಎಂದು ಸಾಕ್ಷ್ಯ ನುಡಿಯುವರು. ಆದರೆ ಈ ಸಮುದಾಯವು ಒಂದು ವೇಳೆ ಕರ್ತವ್ಯಚ್ಯುತಿ ಮಾಡಿದರೆ ಅವರಿಂದಾಗಿ ಪಥಭ್ರಷ್ಟರಾದ ಜನತೆಯ ಅಪರಾಧದ ಜವಾಬ್ದಾರಿಯಲ್ಲಿ ಅವರ ಪಾಲೂ ಇರುವುದು. ನಿರ್ಣಾಯಕ ದಿನದಂದು ಇವರು ನಮಗೆ ಅಲ್ಲಾಹನ ಧರ್ಮ ಏನೆಂಬುದು ತಿಳಿದೇ ಇರಲಿಲ್ಲ ಎಂದರೆ ಅಲ್ಲಾಹನ ಧರ್ಮದ ಸಾಕ್ಷಿಗಳಾದ ಮುಸ್ಲಿಮ್ ಸಮುದಾಯವು ಆತನ ವಿಚಾರಣೆಗೊಳಗಾಗುವುದು ಖಂಡಿತ. ಒಂದು ವೇಳೆ ಮುಸ್ಲಿಮ್ ಸಮುದಾಯವು ತನ್ನ ಕರ್ತವ್ಯವನ್ನು ನೆರವೇರಿಸುವಲ್ಲಿ ಅಸಡ್ಡೆ ತೋರಿದ್ದರೆ ಅದರ ಪರಿಣಾಮ ಎಷ್ಟು ಭಯಾನಕವಾಗಿರಬಹುದೆಂಬುದನ್ನು ಯೋಚಿಸಿ ನೋಡಿ.

ಇಲ್ಲಿ ಒಂದು ವೇಳೆ ಎನ್ನುವ ಪ್ರಶ್ನೆಯೇ ಉಳಿದಿಲ್ಲ. ಮುಸ್ಲಿಮ್ ಸಮುದಾಯದ ಈ ನಿರ್ಲಕ್ಷ್ಯವು ಇಂದು ಸ್ಪಷ್ಟ ಯಥಾರ್ಥವಾಗಿ ಮುಂದೆ ಬಂದಿದೆ. ತಮ್ಮ ನಡೆ-ನುಡಿಗಳಲ್ಲಿ ಅಲ್ಲಾಹನ ಧರ್ಮದ ಸಾಕ್ಷ್ಯ ವಹಿಸಲಿಕ್ಕೆ ನಿಯೋಗಿಸಲ್ಪಟ್ಟ ಸಮುದಾಯವು ಅದಕ್ಕೆ ವಿರುದ್ಧವಾಗಿ ಸಾಕ್ಷ್ಯ ವಹಿಸುತ್ತಿರುವುದನ್ನು ನೋಡಿ ಸತ್ಯದ ಸಾಕ್ಷ್ಯ ವಹಿಸುವ ಕಡ್ಡಾಯ ಕರ್ತವ್ಯದ ಪ್ರಜ್ಞೆ ಹೊಂದಿರುವ ಹೃದಯವು ತಲ್ಲಣಗೊಳ್ಳುತ್ತದೆ. ಈ ಸಮುದಾಯದ ಅಧಿಕಾಂಶ ಜನರು ಇಂದು ಇಲ್ಲಿನ ಇತರ ಸಮುದಾಯಗಳ ಜೀವನ ರೀತಿಯನ್ನೇ ಅನುಕರಿಸುತ್ತಿದ್ದಾರೆ. ನಮ್ಮ ಕೃತಿಯಂತಿರಲಿ ನಮ್ಮ ಮಾತಿನ ಮೂಲಕವಾದರೂ ಇಸ್ಲಾಮಿನ ಸತ್ಯಪೂರ್ಣ ಸಾಕ್ಷ್ಯ ವಹಿಸುವಲ್ಲಿ ನಾವು ವಿಫಲಗೊಂಡಿದ್ದೇವೆ. ಮುಸ್ಲಿಮ್ ಸಮುದಾಯದಲ್ಲಿ ಧರ್ಮನಿಷ್ಠೆಯುಳ್ಳ ಉತ್ತಮ ವ್ಯಕ್ತಿಗಳಿಗೆ ಕೊರತೆಯಿಲ್ಲ. ಆದರೆ ಸಮಸ್ಯೆಯು ಕೇವಲ ಕೆಲವು ವ್ಯಕ್ತಿಗಳದ್ದಾಗಿರದೆ ಇಡೀ ಸಮುದಾಯದ್ದಾಗಿದೆ. ಒಟ್ಟು ಸಮುದಾಯದ ಅವಸ್ಥೆಯು ಸುವ್ಯಕ್ತವಾಗಿದೆ. ನೀತಿ - ನಡವಳಿಕೆಯಲ್ಲಿ ಹಾಗೂ ವ್ಯಾಪಾರ-ವ್ಯವಹಾರಗಳಲ್ಲಿ ನಮ್ಮ ಸ್ಥಿತಿ ಇತರ ಸಮುದಾಯಗಳಿಗಿಂತ ಉತ್ತಮವಲ್ಲ. ನಮ್ಮ ಧಾರ್ಮಿಕತೆಯು ಕೆಲವು ಸಂಪ್ರದಾಯ ಗಳಿಗಷ್ಟೇ ಸೀಮಿತವಾಗಿದೆ. ಹೆಸರಿಗೆ ನಾವು ಮುಸ್ಲಿಮರು. ಆದರೆ ಸುಳ್ಳು, ಕಳ್ಳತನ, ಅಕ್ರಮ, ವಂಚನೆ, ವಚನಭಂಗ,

ಗಲಭೆ-ಗೊಂದಲ, ಅಶ್ಲೀಲ-ಅಸಭ್ಯ ಕಾರ್ಯಗಳನ್ನು ನಾವೂ ಇತರರಂತೆಯೇ ಮಾಡುತ್ತೇವೆ. ನಮ್ಮ ನೀತಿ-ನಡವಳಿಕೆಗಳಲ್ಲಿ, ರೂಢಿ-ಸಂಪ್ರದಾಯ ಗಳಲ್ಲಿ, ಹಬ್ಬ-ಹರಿದಿನ ಗಳಲ್ಲಿ, ಸಭೆ-ಸಮಾರಂಭಗಳಲ್ಲಿ, ಉರೂಸ್-ಉತ್ಸವಗಳಲ್ಲಿ ಇಸ್ಲಾಮ್ ಮತ್ತು ಮುಸ್ಲಿಮ್ ಎಂಬ ಹೆಸರಿಗೇ ಕಳಂಕಪ್ರಾಯವಾದ ಎಲ್ಲಾ ಅನಾಚಾರಗಳೂ ಇವೆ. ಒಟ್ಟಿನಲ್ಲಿ ನಮ್ಮ ಜೀವನದ ವೈಯಕ್ತಿಕ ಮತ್ತು ಸಾಮೂಹಿಕವಾದ ಪ್ರತಿಯೊಂದು ಅಂಶವೂ ಕೆಡಿಸಲ್ಪಟ್ಟಿದೆ. ಈ ವಸ್ತುಸ್ಥಿತಿಯು ಅದೆಷ್ಟು ಭಯಾನಕ! ಮನೆ, ಮಠ, ಅಂಗಡಿ, ಪೇಟೆಗಳಿಂದ ಹಿಡಿದು ಆಡಳಿತದ ಕಚೇರಿಗಳವರೆಗೆ, ಕಾಲೇಜುಗಳಿಂದ ಹಿಡಿದು ಆರಾಧನಾಲಯಗಳ ತನಕ ಎಲ್ಲಿಯೂ ಇಸ್ಲಾಮಿನ ನೈಜ ರೂಪ ಕಾಣ ಸಿಗುವುದಿಲ್ಲ. ಮುಸ್ಲಿಮರು ಅಲ್ಪಸಂಖ್ಯಾತರಾಗಿರುವ ಪ್ರದೇಶಗಳ ಮಾತಂತಿರಲಿ, ಸ್ವತಃ ಮುಸ್ಲಿಮರದ್ದೇ ಆಡಳಿತ ಇರುವ ಪ್ರದೇಶಗಳಲ್ಲೂ ಅವರು ಇಸ್ಲಾಮೀ ಕಾನೂನುಗಳನ್ನು ಬಿಟ್ಟು ಇಸ್ಲಾಮೇತರ ನಿಯಮಗಳನ್ನು ಅಂಗೀಕರಿಸಿಕೊಂಡಿದ್ದಾರೆ. ಈ ಅವಸ್ಥೆಯನ್ನು ಕಂಡು ಮುಸ್ಲಿಮರು ಜಗತ್ತಿನ ಮುಂದೆ ಅಲ್ಲಾಹನ ಧರ್ಮವನ್ನು ಪ್ರತಿಪಾದಿಸುವ ಬದಲು ಅದನ್ನು ಅಡಗಿಸಿದ್ದಾರೆ ಎನ್ನದೆ ನಿರ್ವಾಹವಿಲ್ಲ. ಜಗತ್ತು ದೇವನ ಮಾರ್ಗದರ್ಶನದ ಬೆಳಕಿನಿಂದ ವಂಚಿತರಾಗಿದ್ದರೆ ಅದರ ಹೊಣೆಯಲ್ಲಿ ಒಂದು ಪಾಲು ಮುಸ್ಲಿಮ್ ಸಮುದಾಯಕ್ಕೂ ಇದೆ.

ಸತ್ಯಧರ್ಮದ ಸಾಕ್ಷ್ಯ ವಹಿಸುವ ಬಗ್ಗೆ ಮುಸ್ಲಿಮರಾದ ನಾವು ತಳೆದಿರುವ ನಿರ್ಲಕ್ಷ್ಯ ನೀತಿಯಿಂದ ನಮ್ಮ ಸ್ಥಿತಿಯು ಜನರ ಪ್ರಾಣರಕ್ಷಣೆಯ ಬದಲು ಸ್ವತಃ ತಾವೇ ಕಳ್ಳತನ, ದರೋಡೆ, ಕೊಲೆಯನ್ನು ನಡೆಸುವ ಪೊಲೀಸರಿಗೆ ಸಮಾನವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ನಮ್ಮ ಜೊತೆ ಅಲ್ಲಾಹನ ನಡವಳಿಕೆಯೂ ಇದೇ ಪ್ರಕಾರ ಇರಬೇಕಾದುದು ನ್ಯಾಯದ ಬೇಡಿಕೆಯೇ ಆಗಿದೆ. ಹಾಗೆಯೇ ಆಗುತ್ತಲೂ ಇದೆ. ನಮ್ಮ ಈ ಘೋರ ಅಪರಾಧಕ್ಕೆ ಮಹಾಶಿಕ್ಷೆ ನಿಶ್ಚಯವಿದೆ. ಈ ಮಹಾ ಶಿಕ್ಷೆಯ ಒಂದಂಶವು ನಮಗೆ ಈ ಲೋಕದಲ್ಲೇ ನಿಂದ್ಯತೆ ಮತ್ತು ಪರಾಧೀನತೆಯ ರೂಪದಲ್ಲಿ ದೊರಕುತ್ತಲಿದೆ. ಆದರೆ ಇದು ಪೂರ್ಣ ಶಿಕ್ಷೆಯಲ್ಲ. ಇದರ ಪೂರ್ಣ ಶಿಕ್ಷೆಯು ನಮಗೆ ಪರಲೋಕದಲ್ಲಿ ಸಿಗಲಿದೆ! ನೈಜ ತೀರ್ಪು ಅಲ್ಲೇ ಆಗಲಿದೆ. ಅಲ್ಲಿಯ ಹಿಡಿತವು ನಿಸ್ಸಂಶಯವಾಗಿಯೂ ಬಹಳ ಕಠಿಣವಾಗಿರುವುದು.

ಈ ಶಿಕ್ಷೆ ಮತ್ತು ಹಿಡಿತದಿಂದ ಪಾರಾಗುವ ಒಂದೇ ಉಪಾಯವೆಂದರೆ ನಮಗೆ ನಮ್ಮ ತಪ್ಪಿನ ಅರಿವಾಗಬೇಕು. ನಾವು ಈ ಶಿಕ್ಷೆಯಿಂದ ಪಾರಾಗುವ ಚಿಂತೆಯಲ್ಲಿಯೇ ತೊಡಗಿರಬೇಕು. ಒಂದು ದೀರ್ಘ ಕಾಲದಿಂದ ನಾವು ನಮ್ಮ ಹೊಣೆಯನ್ನು

ಮರೆತಿದ್ದೇವೆ. ನಮ್ಮ ಜೀವನೋದ್ದೇಶದಿಂದ ಸಂಪೂರ್ಣ ಅಶ್ರದ್ಧರಾಗಿದ್ದು, ಅದರ ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಎಲ್ಲಿಯ ವರೆಗೆ ನಾವು ಈ ಹೊಣೆಗಾರಿಕೆಯನ್ನು ವಹಿಸುವುದರಿಂದ ದೂರ ಉಳಿಯುತ್ತೇವೊ ನಮ್ಮ ಭವಿಷ್ಯವು ಕರಾಳವೇ ಆಗಿರುವುದು. ಅದನ್ನು ಬೆಳಗಿಸ ಬೇಕೆಂದಿದ್ದರೆ ನಾವು ನಮ್ಮ ಧರ್ಮದತ್ತ ಮರಳಬೇಕಾದ ಅಗತ್ಯವಿದೆ. ಧರ್ಮದೊಂದಿಗೆ ಆಂಶಿಕವಾದ ಸಂಬಂಧದ ಬದಲು ಸಂಪೂರ್ಣವಾದ ಸಂಬಂಧ ಬೆಳೆಸುವುದು ಅವಶ್ಯ. ಇಸ್ಲಾಮನ್ನು ಸಂಪೂರ್ಣವಾಗಿ ನಮ್ಮ ಧರ್ಮ ವಾಗಿರಿಸಬೇಕು. ನಮ್ಮ ಜೀವನದ ಪ್ರತಿಯೊಂದು ರಂಗವನ್ನೂ ಅದರ ಆಜ್ಞೆಗಳ ಪ್ರಕಾಶದಿಂದ ಬೆಳಗಿಸಬೇಕು. ನಮ್ಮ ಮನೆ, ಕುಟುಂಬ, ಸಮಾಜ, ಶಾಲೆ, ವಿದ್ಯಾಲಯ, ಸಾಹಿತ್ಯ ಮತ್ತು ಪತ್ರಿಕೋದ್ಯಮ, ನಮ್ಮ ವ್ಯಾಪಾರ ಉದ್ದಿಮೆಗಳು, ಆರ್ಥಿಕ ವ್ಯವ ಹಾರ, ನಮ್ಮ ಸಂಘ-ಸಂಸ್ಥೆಗಳು ಹಾಗೂ ಸರಕಾರ ಹೀಗೆ ಸಾಧ್ಯವಿರುವಲ್ಲೆಲ್ಲಾ ಅದರ ಮಾರ್ಗದರ್ಶನಗಳನ್ನು ಜಾರಿಗೆ ತರಬೇಕು. ಜಗತ್ತಿನ ಮುಂದೆ ನಮ್ಮ ಮಾತು-ಕೃತಿಗಳಿಂದ ಇದರ ಸತ್ಯತೆಯ ಸಾಕ್ಷಿಗಳಾಗಬೇಕು. ಈ ಸಾಕ್ಷ್ಯದ ಕರ್ತವ್ಯವನ್ನು ಬಿಟ್ಟ ಮೇಲೆ ನಮ್ಮ ಅಸ್ತಿತ್ವಕ್ಕೆ ಯಾವ ಬೆಲೆಯೂ ಅರ್ಥವೂ ಇರುವುದಿಲ್ಲವೆಂಬುದನ್ನು ಚೆನ್ನಾಗಿ ತಿಳಿದಿರಬೇಕು. ನಮ್ಮ ಅಭಿರುಚಿ, ಪರಿಶ್ರಮ ಮತ್ತು ಚಿಂತನ ಕೇಂದ್ರವು ಸತ್ಯದ ಸಾಕ್ಷ್ಯವೇ ಆಗಿರಬೇಕು. ಅದುವೇ ನಮ್ಮ ಅಸ್ತಿತ್ವದ ನೈಜ ಉದ್ದೇಶವಾಗಿದೆ. ಈ ಉದ್ದೇಶಕ್ಕೆ ವಿರುದ್ಧವಾದ ಹಾಗೂ ಲೋಕದ ಮುಂದೆ ಇಸ್ಲಾಮಿನ ತಪ್ಪು ಪ್ರಾತಿನಿಧ್ಯ ನೀಡುವ ಎಲ್ಲಾ ಕಾರ್ಯಗಳಿಂದ ನಾವು ದೂರ ಉಳಿಯಬೇಕು.

❖ ❖ ❖ ❖

ಧರ್ಮ ಸಂಸ್ಥಾಪನೆ

ಅಲ್ಲಾಹನ ವತಿಯಿಂದ ಭೂಲೋಕಕ್ಕೆ ಬಂದ ಎಲ್ಲ ಪ್ರವಾದಿಗಳೂ ಅಲ್ಲಾಹನ ದಾಸರನ್ನು ಆತನ ದಾಸ್ಯದೆಡೆಗೆ ಆಹ್ವಾನಿಸಿದರು. ಇನ್ನಿತರ ದಾಸ್ಯಗಳಿಂದ ಅವರನ್ನು ಸ್ವತಂತ್ರಗೊಳಿಸಿದರು.

(ಸಂದೇಶವಾಹಕರು ಹೇಳಿದರು) "ಕೇವಲ ಅಲ್ಲಾಹನ ದಾಸ್ಯ ಕೈಗೊಳ್ಳಿರಿ. ಅವನ ಹೊರತು ಅನ್ಯರ ದಾಸ್ಯ ಕೈಗೊಳ್ಳದಿರಿ." **(ಪವಿತ್ರ ಕುರ್‌ಆನ್: 11: 26, 41: 14, 46: 21)**

ಅವರೆಲ್ಲರೂ ಈ ರೀತಿ ಹೇಳಿದರು: ಆಜ್ಞಾಧಿಕಾರಿ ಮತ್ತು ಪ್ರಭು ಅಲ್ಲಾಹನೇ ಆಗಿದ್ದಾನೆ. ಅವನ ಹೊರತು ಇನ್ನಾರಿಗೂ ಆಜ್ಞೆ ನೀಡುವ ಅಧಿಕಾರವಿಲ್ಲ. ಅವನೇ ಮಾನವರನ್ನೊಳಗೊಂಡ ಸಕಲ ಚರಾಚರಗಳ ಕೃರ್ತೃ, ಸಮಸ್ತ ವಿಶ್ವದ ಸೃಷ್ಟಿಕರ್ತ. ಆದ್ದರಿಂದಲೇ ಆತ ಎಲ್ಲರ ಒಡೆಯನೂ ಆಜ್ಞಾಧಿಕಾರಿಯೂ ಆಗಿದ್ದಾನೆ:

"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅಲ್ಲಾಹನದು."

(ಪವಿತ್ರ ಕುರ್‌ಆನ್: 2: 284)

"ಎಚ್ಚರಿಕೆ! ಅವನದೇ ಸೃಷ್ಟಿ, ಅವನದೇ ಅಪ್ಪಣೆ." **(ಪವಿತ್ರ ಕುರ್‌ಆನ್: 7: 54)**

ಪ್ರವಾದಿಗಳು ಹೇಳಿದರು: "ಇಬಾದತ್ ಮತ್ತು ಉಪಾಸನೆಗಳಿಗೂ ಆತನು ಮಾತ್ರ ಅರ್ಹನಾಗಿ, ಅನುಸರಣೆ ಮತ್ತು ದಾಸ್ಯನಾಗಿರುತ್ತಾನೆ."

"ಹೇ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿರುವುದನ್ನೆಲ್ಲ ಅನುಸರಿಸಿರಿ ಮತ್ತು ನಿಮ್ಮ ಪಾಲಕ ಪ್ರಭುವನ್ನು ಬಿಟ್ಟು ಇತರ ಸಂರಕ್ಷಕರನ್ನು ಅನುಸರಿಸ ಬೇಡಿರಿ. ಆದರೆ ನೀವು ಉಪದೇಶವನ್ನು ಅಲ್ಪವೇ ಸ್ವೀಕರಿಸುತ್ತೀರಿ."

(ಪವಿತ್ರ ಕುರ್‌ಆನ್: 7: 3)

ಅಲ್ಲಾಹನನ್ನು ಪ್ರಭುವಾಗಿ ಅಂಗೀಕರಿಸುವುದರ ತಾತ್ಪರ್ಯವೇನೆಂದರೆ ಆತನ

ಕಾನೂನನ್ನು ಮಾತ್ರ ನೈಜ ಕಾನೂನೆಂದು ಅಂಗೀಕರಿಸಿ ಅದರ ಅನುಸರಣೆ ಮಾಡುವುದಾಗಿದೆ. ಅಲ್ಲಾಹನ ವತಿಯಿಂದಲ್ಲದ ಅಥವಾ ಆತನ ಕಾನೂನಿಗೆ ಬದ್ಧವಾಗಿಲ್ಲದ ಕಾನೂನನ್ನು ಧರ್ಮಬದ್ಧವೆಂದು ಸಮ್ಮತಿಸಿ ಅನುಸರಿಸುವುದು ಶಿರ್ಕ್ (ಬಹು ದೇವಾರಾಧನೆ) ಆಗಿದೆ. ಅದು ಆ ಕಾನೂನು ನಿರ್ಮಾಪಕನನ್ನು ದೇವನಾಗಿಸುವುದಕ್ಕೆ ಸಮಾನವಾಗಿದೆ. ಮಾನವನ ಸಂಪೂರ್ಣ ಜೀವನವು ಅಲ್ಲಾಹನ ಆಜ್ಞೆಗಳಿಗೆ ಬದ್ಧವಾಗಿರುವುದೇ ಧರ್ಮವಾಗಿದೆ. ಜೀವನದ ಯಾವ ಭಾಗವೂ ದೇವೇತರರ ಆಜ್ಞೆಗಳಿಗೆ ಬದ್ಧವಾಗದಿರುವುದು ಅದರ ಅನಿವಾರ್ಯ ಬೇಡಿಕೆಯಾಗಿದೆ.

"ಓ ಪೈಗಂಬರರೇ, (ಹೀಗೆ) ಹೇಳಿರಿ: ನನ್ನ ಪ್ರಭು ನನಗೆ ನೇರ ಮಾರ್ಗವನ್ನು ತೋರಿಸಿದ್ದಾನೆ. ಯಾವುದೇ ವಕ್ರತೆಯಿಲ್ಲದ ಅತ್ಯಂತ ಸರಿಯಾದ ಧರ್ಮ, ಇಬ್‌ರಾಹೀಮರು ಏಕನಿಷ್ಠೆಯಿಂದ ಕೈಗೊಂಡ ಮಾರ್ಗ- ಅವರು 'ಬಹುದೇವವಿಶ್ವಾಸಿ'ಗಳಲ್ಲಾಗಿರಲಿಲ್ಲ." ಹೇಳಿರಿ- ನನ್ನ ನಮಾಝ್, ನನ್ನ ಸರ್ವ ಉಪಾಸನಾ ವಿಧಿಗಳು, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಯಾವ ಸಹಭಾಗಿಯೂ ಇಲ್ಲದ ಸರ್ವಲೋಕಪಾಲಕನಿಗಾಗಿದೆ- ಇದನ್ನೇ ನನಗೆ ಆದೇಶಿಸಲಾಗಿದೆ. ನಾನು ಆಜ್ಞಾನುಸರಣೆಯೊಂದಿಗೆ ಶಿರಬಾಗುವವರಲ್ಲಿ ಸರ್ವ ಪ್ರಥಮನಾಗಿರುತ್ತೇನೆ."

(ಪವಿತ್ರ ಕುರ್‌ಆನ್: 6: 161-163)

ಯಥಾರ್ಥದಲ್ಲಿ ಅಲ್ಲಾಹನ ಧರ್ಮವಾದ ಇಸ್ಲಾಮ್ ಮಾನವನ ಸಂಪೂರ್ಣ ಜೀವನಕ್ಕಾಗಿರುತ್ತದೆ.

"ಅಲ್ಲಾಹನ ಬಳಿ(ಮನುಷ್ಯರಿಗಾಗಿ) ಯೋಗ್ಯ ಧರ್ಮವು ಕೇವಲ ಅಲ್ ಇಸ್ಲಾಮ್ ಆಗಿದೆ." **(ಪವಿತ್ರ ಕುರ್‌ಆನ್: 3: 19)**

"ಓ ಸತ್ಯವಿಶ್ವಾಸಿಗಳೇ, ನೀವು ಸರ್ವ ಸಂಪೂರ್ಣವಾಗಿ ಇಸ್ಲಾಮಿನೊಳಗೆ ಸೇರಿ ಕೊಳ್ಳಿರಿ." **(ಪವಿತ್ರ ಕುರ್‌ಆನ್: 2: 208)**

ಜೀವನದ ಎಲ್ಲ ಸಮಸ್ಯೆಗಳು ಅವು ವೈಯಕ್ತಿಕವಾಗಿರಲಿ ಅಥವಾ ಸಾಮೂಹಿಕವಾಗಿರಲಿ ಈ ಧರ್ಮದಿಂದ ಪರಿಹಾರವಾಗುತ್ತದೆ. ಈ ಧರ್ಮವೇ ನಮಗೆ ದೇವ, ಪರಲೋಕ, ಪ್ರವಾದಿಗಳು, ದೇವಚರರು ಮತ್ತು ದೇವಗ್ರಂಥಗಳ ಮೇಲೆ ಹೇಗೆ ವಿಶ್ವಾಸವಿಡಬೇಕೆಂದು ತಿಳಿಸಿತು. ಯಾರ ಇಬಾದತ್ ಮಾಡಬೇಕು, ಹೇಗೆ ಮಾಡಬೇಕು ಹಾಗೂ ದೇವನೊಡನೆ ದಾಸನ ಸಂಬಂಧ ಹೇಗಿರಬೇಕು, ಅದು ಹೇಗೆ ಸುಸ್ಥಿರಗೊಳ್ಳಬೇಕೆಂದೂ ತಿಳಿಸಿದೆ. ನಮ್ಮ ನಡವಳಿಕೆ ಹೇಗಿರಬೇಕು ಮತ್ತು ಜೀವನವನ್ನು ನೀತಿ-

ನಡವಳಿಕೆಗಳ ಚೌಕಟ್ಟಿನೊಳಗೆ ಹೇಗೆ ಇರಿಸಬಹುದೆಂಬುದನ್ನು, ಪರಸ್ಪರ ಸಂಬಂಧ ಹೇಗಿರಬೇಕೆಂಬುದನ್ನೂ ಮಾನವರ ಪರಸ್ಪರ ಹಕ್ಕು ಬಾಧ್ಯತೆಗಳು ಏನೇನು ಎಂಬುದನ್ನೂ ತಿಳಿಸಿದೆ. ವ್ಯಾಪಾರ ವಹಿವಾಟು, ಲೇವಾದೇವಿ ಮತ್ತು ಆರ್ಥಿಕ ವ್ಯವಹಾರಗಳ ಬಗ್ಗೆ ನಮಗೆ ಸರಿಯಾದ ಮಾರ್ಗದರ್ಶನ ನೀಡಿದೆ. ಧರ್ಮವು ಸಾಮಾಜಿಕ, ವ್ಯಾವಹಾರಿಕ ಮತ್ತು ರಾಜಕೀಯ ವಿಷಯಗಳಲ್ಲೂ ನಮಗೆ ಮಾರ್ಗದರ್ಶನ ನೀಡಿದೆ. ಸಮಾಜದ ಸುಧಾರಣೆ, ರಾಷ್ಟ್ರದ ದಕ್ಷ ಆಡಳಿತ, ಸರಕಾರ ನಡೆಸುವ ಕ್ರಮ, ಕಾನೂನು ರಚನೆಯ ನೈಜ ಸಿದ್ಧಾಂತಗಳಾವುವೆಂಬುದನ್ನು ತಿಳಿಸಿದೆ. ಒಟ್ಟಿನಲ್ಲಿ ಅದು ನಮಗೆ ಮಾಡಿರುವ ಮಾರ್ಗದರ್ಶನವನ್ನು ಪೂರ್ಣನಿಷ್ಠೆಯಿಂದ ಪಾಲಿಸಿದರೆ ನಾವು ಇಹಲೋಕದಲ್ಲಿ ವಿಜಯ, ಶ್ರೇಯಸ್ಸು ಹಾಗೂ ಪರಲೋಕದಲ್ಲಿ ಶಾಶ್ವತ ಮೋಕ್ಷ ಮತ್ತು ಸ್ವರ್ಗವನ್ನು ಪಡೆಯಬಹುದು.

ಧರ್ಮದ ಈ ವಿಶಾಲ ಪರಿಕಲ್ಪನೆಯನ್ನು ಮುಂದಿಟ್ಟು ನೋಡಿದರೆ ಇಸ್ಲಾಮಿನ ನೈಜ ಅನುಸರಣೆಗೆ ವೈಯಕ್ತಿಕ ಮತ್ತು ಸಾಮಾಜಿಕ ಸುಧಾರಣೆಯ ಅಗತ್ಯದಂತೆಯೇ ಸರಕಾರ ಮತ್ತು ಆಡಳಿತದ ಸುಧಾರಣೆಯೂ ಅಗತ್ಯವೆಂದೂ ಅನ್ಯ ಧರ್ಮಗಳ ಮಿಥ್ಯ ಕಾನೂನುಗಳಿಗೆದುರು ಸತ್ಯ ಧರ್ಮದ ಕಾನೂನುಗಳು ಲೋಕದಲ್ಲಿ ಪ್ರಬಲಗೊಳ್ಳ ಬೇಕಾಗಿದೆಯೆಂದೂ ನಿಮಗೆ ಅನಿಸದಿರದು. ಹೀಗಾಗದಿದ್ದಲ್ಲಿ ನಮ್ಮ ಜೀವನದ ಬಹು ಭಾಗವು ದೇವೇತರರ ನಿಯಮಗಳಿಗರ್ಪಿತವಾಗಿ ಅತ್ಯಲ್ಪ ಭಾಗದೊಳಗೆ ಮಾತ್ರ ನಾವು ದೇವನ ದಾಸ್ಯ-ಉಪಾಸನೆ ಮತ್ತು ಆತನ ಧರ್ಮದ ಅನುಸರಣೆ ಮಾಡಲು ಶಕ್ತ ರಾಗುತ್ತೇವೆ. ಅದು ಕೂಡಾ ಆಳುವ ಸರಕಾರದ ಅನುಮತಿಯನ್ನು ಹೊಂದಿಕೊಂಡು ಮತ್ತು ಅದು ನಮ್ಮನ್ನು ಸಹಿಸುವ ಕಾಲದವರೆಗೆ ಮಾತ್ರ. ಆದ್ದರಿಂದಲೇ ದೇವನ ಅಂತಿಮ ಪ್ರವಾದಿ, ಹ. ಮುಹಮ್ಮದ್(ಸ) ಅವರು ದೇವನ ಸಂದೇಶವನ್ನು ಮುಟ್ಟಿಸಲಿಕ್ಕಾಗಿ ಮಾತ್ರ ಬಂದಿರದೆ ಈ ಸದ್ಧರ್ಮವನ್ನು ಲೋಕದ ಇತರ ಎಲ್ಲ ಜೀವನ ವ್ಯವಸ್ಥೆಗಳಿಗಿಂತ ಉನ್ನತಗೊಳಿಸಲಿಕ್ಕಾಗಿ ಬಂದಿದ್ದರು.

"ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ತನ್ನ ಸಂದೇಶವಾಹಕನನ್ನು ಕಳುಹಿಸಿರು ವವನು ಅವನೇ. ಅದನ್ನು ಸಂಪೂರ್ಣ ಧರ್ಮದ ಮೇಲೆ ಪ್ರಬಲಗೊಳಿಸಲಿಕ್ಕಾಗಿ. ಬಹುದೇವ ವಿಶ್ವಾಸಿಗಳಿಗೆ ಇದು ಎಷ್ಟೇ ಅಪ್ರಿಯವಾದರೂ ಸರಿಯೆ."

(ಪವಿತ್ರ ಕುರ್‌ಆನ್: 61: 9)

ಸತ್ಯಧರ್ಮವನ್ನು ಪ್ರಬಲಗೊಳಿಸುವ ಈ ಕಾರ್ಯವೇ ಅಂತಿಮ ಪ್ರವಾದಿ ಯವರ(ಸ) ಆಗಮನೋದ್ದೇಶವಾಗಿತ್ತು. ಇದು ಏಕಾಂಗಿಯಾಗಿ ಮಾಡಲು ಅಸಾಧ್ಯವಾದ

ಕಾರ್ಯವಾದ್ದರಿಂದ ಒಂದು ಸುಸಂಘಟಿತ ಕೂಟವು ಅವರೊಂದಿಗೆ ಇರುವುದು ಮತ್ತು ಆ ಕೂಟವು ತನ್ನ ಜೀವನದ ಎಲ್ಲ ಶಕ್ತಿ-ಸಾಮರ್ಥ್ಯಗಳನ್ನು ಇದಕ್ಕಾಗಿ ವ್ಯಯಿಸುವುದು ಅನಿವಾರ್ಯವಿತ್ತು. ಭೂಮಿಯ ಪ್ರತಿಯೊಂದು ಗೇಣು ಪ್ರದೇಶವೂ ಅಲ್ಲಾಹನ ಶಾಸನ, ನಿಯಮಗಳಿಗಧೀನವಾಗದೆ ಮುಸ್ಲಿಮ್ ಜನ ಸಮುದಾಯದ ಜೀವನೋದ್ದೇಶ ಸಾರ್ಥಕ ಗೊಳ್ಳುವುದಿಲ್ಲ. ಆದ್ದರಿಂದಲೇ ಮೇಲಿನ ಸೂಕ್ತದ ಬಳಿಕ ಈ ಕೆಳಗಿನ ಸೂಕ್ತವು ಬಂದಿದೆ.

"ಸತ್ಯವಿಶ್ವಾಸಿಗಳೇ, ನಿಮ್ಮನ್ನು ವೇದನಾಯುಕ್ತ ಯಾತನೆಯಿಂದ ರಕ್ಷಿಸುವಂತಹ ಒಂದು ವ್ಯಾಪಾರವನ್ನು ನಾನು ನಿಮಗೆ ತೋರಿಸಿ ಕೊಡಲೇ? ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿರಿ ಮತ್ತು ನಿಮ್ಮ ಸಂಪತ್ತುಗಳಿಂದಲೂ ಜೀವ ಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ನೀವು ಅರಿಯುವವರಾಗಿದ್ದರೆ ನಿಮ್ಮ ಪಾಲಿಗೆ ಇದೇ ಉತ್ತಮವಾಗಿದೆ. ಅಲ್ಲಾಹನು ನಿಮ್ಮ ಪಾಪಗಳನ್ನು ಕ್ಷಮಿಸುವನು ಮತ್ತು ತಳ ಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವಂತಹ ಸ್ವರ್ಗೋದ್ಯಾನಗಳಲ್ಲಿ ನಿಮ್ಮನ್ನು ಪ್ರವೇಶಗೊಳಿಸುವನು. ಸದಾ ನೆಲೆಸುವಂತಹ ಸ್ವರ್ಗಗಳಲ್ಲಿ ಅತ್ಯುತ್ತಮ ಭವನಗಳನ್ನು ನಿಮಗೆ ದಯಪಾಲಿಸುವನು. ಇದೇ ಮಹಾ ಯಶಸ್ಸು- ಮತ್ತು ನೀವು ಬಯಸುವಂತಹ ಇನ್ನೊಂದು ವಸ್ತುವನ್ನೂ ನಿಮಗೆ ಕೊಡುವನು. ಅಂದರೆ, ಅಲ್ಲಾಹನ ಕಡೆಯಿಂದ ಸಹಾಯ ಮತ್ತು ಶೀಘ್ರದಲ್ಲೇ ಸಿಗಲಿರುವ ವಿಜಯ. ಸಂದೇಶವಾಹಕರೇ, ಸತ್ಯವಿಶ್ವಾಸಿಗಳಿಗೆ ಇದರ ಸುವಾರ್ತೆ ನೀಡಿರಿ." **(ಪವಿತ್ರ ಕುರ್‌ಆನ್: 61: 10-13)**

ಈ ಸೂಕ್ತವು ಇಹ-ಪರಗಳಲ್ಲಿನ ಸೋಲು ಮತ್ತು ಕಠಿಣ ಶಿಕ್ಷೆಯಿಂದ ರಕ್ಷಣೆ ಹೊಂದುವ ಉಪಾಯ ಹಾಗೂ ಇಹ-ಪರಗಳೆರಡರ ವಿಜಯ ಮತ್ತು ದೇವನ ಸಹಾಯ, ಕೃಪೆ, ಕ್ಷಮೆ ಹಾಗೂ ಸ್ವರ್ಗಕ್ಕೆ ಸೇರುವ ದಾರಿ ಯಾವುದೆಂಬುದನ್ನು ಸ್ಪಷ್ಟ ವಾಗಿ ಸೂಚಿಸುತ್ತದೆ. ಅದು ಕೇವಲ ದೇವನ ಮತ್ತು ಆತನ ಸಂದೇಶವಾಹಕರ ಮೇಲಿನ ವಿಶ್ವಾಸ ಹಾಗೂ ಅವರ ದಾರಿಯಲ್ಲಿ ನಿರಂತರ ಪರಿಶ್ರಮಿಸುವುದೇ ಆಗಿದೆ.

ಅಲ್ಲಾಹನ ದಾರಿಯಲ್ಲಿ ಪರಿಶ್ರಮ ಹೂಡುವುದೆಂದರೇನು? ಮಾನವನು ಸ್ವಾರ್ಥ ರಹಿತನಾಗಿ, ಸಂಪೂರ್ಣ ಏಕಾಗ್ರತೆಯಿಂದ ಅಲ್ಲಾಹನ ಧರ್ಮದ ಅನುಸರಣೆ, ಅದರ ಕಡೆಗೆ ಆಹ್ವಾನ ಮತ್ತು ಪ್ರಚಾರ ಹಾಗೂ ಅದನ್ನು ಪ್ರಬಲಗೊಳಿಸುವುದರಲ್ಲೇ ತಲ್ಲೀನನಾಗಿ ತನ್ನ ಎಲ್ಲ ಶಕ್ತಿ-ಸಾಮರ್ಥ್ಯಗಳು, ಸಾಧನ-ಸಲಕರಣೆಗಳನ್ನು ಅದಕ್ಕಾಗಿ ಉಪಯೋಗಿಸಬೇಕೆಂಬುದೇ ಅದರ ತಾತ್ಪರ್ಯವಾಗಿದೆ. ಇದನ್ನೇ ಇನ್ನೊಂದು ರೀತಿ ಯಲ್ಲಿ 'ಇಕಾಮತುದ್ದೀನ್' ಅರ್ಥಾತ್ ಧರ್ಮಸಂಸ್ಥಾಪನೆ ಎನ್ನುವುದು.

ಈ "ಧರ್ಮ ಸಂಸ್ಥಾಪನೆ"ಯೇ ಪ್ರತಿಯೊಂದು ಕಾಲದಲ್ಲೂ 'ಸತ್ಯಧರ್ಮ'ದ ಆಗಮನೋದ್ದೇಶವಾಗಿದ್ದಿತೆಂದು ಕುರ್‌ಆನ್‌ನಿಂದ ತಿಳಿದು ಬರುತ್ತದೆ. ಎಲ್ಲ ಪ್ರವಾದಿಗಳ ಆಗಮನೋದ್ದೇಶವು ಇದೇ ಆಗಿತ್ತು. ಈ ಉದ್ದೇಶ ಸಾಧನೆಗಾಗಿಯೇ ಒಗ್ಗಟ್ಟಿನಿಂದ ಪರಿಶ್ರಮ ಹೂಡಬೇಕೆಂದು ಸತ್ಯವಿಶ್ವಾಸಿಗಳಿಗೆ ಒತ್ತಿ ಹೇಳಲಾಗಿದೆ.

"(ಓ ಮುಹಮ್ಮದರೇ!) ಯಾವ ಧರ್ಮವನ್ನು ನಾವು ನೂಹರಿಗೆ ಬೋಧಿಸಿದ್ದೆವೋ ಅದನ್ನೇ ನಾವು ನಿಮಗೂ ನಿಶ್ಚಯಿಸಿರುತ್ತೇವೆ. ಅದನ್ನೇ ನಾವು ಇಬ್ರಾಹೀಮ್, ಮೂಸಾ ಮತ್ತು ಈಸಾರಿಗೆ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಆ ಬಗ್ಗೆ ಭಿನ್ನರಾಗದಿರಿ ಎಂಬ ಕಟ್ಟಾಜ್ಞೆಯೊಂದಿಗೆ." (ಪವಿತ್ರ ಕುರ್‌ಆನ್: 26: 13)

ಹಾಗೆ ನೋಡುವಾಗ ಮುಸ್ಲಿಮ್ ಸಮುದಾಯದ ಏಕಮಾತ್ರ ಜೀವನೋದ್ದೇಶವು ಮುಸ್ಲಿಮ್ ಜನಸಮುದಾಯವು ಒಗ್ಗಟ್ಟಾಗಿ ದೇವಧರ್ಮವನ್ನು ಅನುಸರಿಸುವುದು. ದೇವನ ಧರ್ಮದೆಡೆಗೆ ಜನರನ್ನು ಆಹ್ವಾನಿಸುವುದು ಮತ್ತು ಅದನ್ನು ಪ್ರಬಲಗೊಳಿಸಲು ಹೆಣಗಾಡುವುದೇ ಆಗಿದೆ. ಇನ್ನೊಂದು ರೀತಿಯಲ್ಲಿ ಅವರು ಧರ್ಮಸಂಸ್ಥಾಪನೆಯನ್ನೇ ತಮ್ಮ ಜೀವನೋದ್ದೇಶ ಮತ್ತು ಧ್ಯೇಯವಾಗಿರಿಸಬೇಕು. ಮಾತ್ರವಲ್ಲ ಇದಕ್ಕಾಗಿ ಸರ್ವ ವಿಧದ ತ್ಯಾಗಗಳಿಗೂ ಸಿದ್ಧರಾಗಬೇಕು. ಅನ್ಯಥಾ ಮುಸ್ಲಿಮ್ ಜನ ಸಮುದಾಯದ ಸಮಸ್ಯೆಗಳು ಬಗೆಹರಿಯಲಾರವು. ಮಾತ್ರವಲ್ಲ ಲೋಕದೊಳಗೆ ಅವರು ಪರಾಜಿತರೂ ನಿಂದ್ಯರೂ ಆಗುವರು. ಮಾನವ ಜನಾಂಗವನ್ನು ನೀಚತೆ ಮತ್ತು ನಿಂದ್ಯತೆಯಿಂದ ರಕ್ಷಿಸಲು ಅವರಿಂದಾಗದು. ಪರಲೋಕದಲ್ಲಿಯೂ ಅವರು ವಿಜಯಿಗಳಾಗಲಾರರು ಮತ್ತು ಮುಸ್ಲಿಮರಾಗಿದ್ದುಕೊಂಡು ತಮ್ಮ ಕರ್ತವ್ಯವನ್ನು ಪೂರೈಸಲಿಲ್ಲವೆಂಬ ಮಹಾ ಅಪರಾಧಕ್ಕಾಗಿ ಶಿಕ್ಷೆ ಗೊಳಗಾಗುವರು. ತಮ್ಮ ಲೌಕಿಕ ಮತ್ತು ಪಾಲೌಕಿಕ ವಿಜಯ ಹಾಗೂ ರಕ್ಷಣೆಯು ದೇವನ ಧರ್ಮದ ಸ್ವೀಕಾರದಿಂದ ಮಾತ್ರ ಲಭಿಸುವುದೆಂಬ ಸತ್ಯವನ್ನು ಜನರು ಗ್ರಹಿಸು ವವರೆಗೆ ಹಾಗೂ ಸರಕಾರ ಸಹಿತ ಜೀವನದ ಎಲ್ಲ ವ್ಯವಸ್ಥೆಗಳೂ ದೇವನ ಧರ್ಮಕ್ಕೆ ಅಧೀನವಾಗಿರಬೇಕೆಂದು ನಿರ್ಧರಿಸುವ ತನಕ ಈ ಕಾರ್ಯ ಕೈಗೂಡದು. ಪ್ರತಿಯೋರ್ವ ಮುಸ್ಲಿಮನೂ ದೇವಧರ್ಮವನ್ನು ಪೂರ್ಣವಾಗಿ ಅನುಸರಿಸತೊಡಗಿದಾಗ ಮತ್ತು ದೇವಧರ್ಮದ ಸಂದೇಶವನ್ನು ದೇವನ ದಾಸರಿಗೆ ವೈಯಕ್ತಿಕವಾಗಿಯೂ ಸಾಮೂಹಿಕ ವಾಗಿಯೂ ತಲುಪಿಸುವ ಕಾರ್ಯದಲ್ಲಿ ಹಗಲಿರುಳು ನಿರತನಾದಾಗ ಮಾತ್ರ ಧರ್ಮ ಸಂಸ್ಥಾಪನೆಯ ಕಾರ್ಯ ಸುಲಭಗೊಳ್ಳುತ್ತದೆ.

❖ ❖ ❖ ❖

ಜಮಾಅತೆ ಇಸ್ಲಾಮೀ ಹಿಂದ್ ಸಂಕ್ಷಿಪ್ತ ಪರಿಚಯ

ಪ್ರತಿಯೊಬ್ಬ ಮುಸ್ಲಿಮನು ಮತ್ತು ಅಖಿಲ ಮುಸ್ಲಿಮ್ ಸಮುದಾಯದ ಜೀವನದ ಏಕಮಾತ್ರ ಉದ್ದೇಶವು ದೇವನ ಧರ್ಮದ ನೈಜ ಸಾಕ್ಷ್ಯ ಮತ್ತು ಸಂಸ್ಥಾಪನೆಯಾಗಿದೆಯೆಂಬುದನ್ನು ಈ ಹಿಂದೆ ವಿವರಿಸಲಾಗಿದೆ. ಇಂದು ಮುಸ್ಲಿಮರು ಸಾಮಾನ್ಯವಾಗಿ ಈ ನೈಜ ತತ್ವ ಸಿದ್ಧಾಂತದಿಂದ ವಿಮುಖರಾಗಿ ಮಿಥ್ಯ ತತ್ವಶಾಸ್ತ್ರಗಳಿಗೆ ಮಾರು ಹೋಗಿದ್ದಾರೆ. ಇದರಿಂದಾಗಿ ಅವರು ತಮ್ಮ ಲೌಕಿಕ ಜೀವನವನ್ನು ಹಾಳು ಗೆಡಹುತ್ತಿರುವರಲ್ಲದೆ ತಮ್ಮ ಶಾಶ್ವತ ಪರಲೋಕ ಜೀವನವನ್ನೂ ನಷ್ಟಕ್ಕೊಳಪಡಿಸುತ್ತಿದ್ದಾರೆಂಬುದು ಒಂದು ಕಟು ಸತ್ಯ.

ಮುಸ್ಲಿಮ್ ಸಮುದಾಯವು ಮರೆತಿರುವ ಈ ನೈಜ ಕರ್ತವ್ಯವನ್ನು ಜಮಾಅತೆ ಇಸ್ಲಾಮಿೂ ಹಿಂದ್ ಅದಕ್ಕೆ ನೆನಪಿಸುತ್ತದೆ. ದೇವನ ಎಲ್ಲ ದಾಸರನ್ನು ಅವರ ಜೀವನದ ನೈಜ ಉದ್ದೇಶದ ಕಡೆಗೆ ಆಹ್ವಾನಿಸುತ್ತದೆ. ದೇವನ ಧರ್ಮದ ಸಂಸ್ಥಾಪನೆಯೇ ಅದರ ಧ್ಯೇಯ. ಇದುವೇ ಮುಸ್ಲಿಮರ ನೈಜ ಗುರಿಯೂ ಆಗಿರುವುದರಿಂದ ಇದಕ್ಕಾಗಿ ಅವರು ಏಕಾಗ್ರಚಿತ್ತರಾಗಬೇಕೆಂದು ಅದು ಕರೆ ನೀಡುತ್ತದೆ. ಲೌಕಿಕ ವಿಜಯ ಮತ್ತು ಪಾರ ಲೌಕಿಕ ಮೋಕ್ಷವು ಸತ್ಯಧರ್ಮವಾದ ಇಸ್ಲಾಮಿನಿಂದ ಮಾತ್ರ ಸಾಧ್ಯ. ಅದರಿಂದ ಇಸ್ಲಾಮೀ ಆಂದೋಲನದ ಬಗ್ಗೆ ಶಾಂತಚಿತ್ತರಾಗಿ ಅಭ್ಯಸಿಸಬೇಕೆಂದೂ ಬಿಚ್ಚು ಮನಸ್ಸಿನೊಂದಿಗೆ ಅದರ ಸತ್ಯತೆಯ ಬಗ್ಗೆ ಚಿಂತನೆ ನಡೆಸಬೇಕೆಂದೂ ಅದು ದೇಶದ ಎಲ್ಲ ಬಾಂಧವರನ್ನೂ ಕೇಳಿಕೊಳ್ಳುತ್ತದೆ.

ಜಮಾಅತೆ ಇಸ್ಲಾಮೀ ಹಿಂದ್‌ಗೆ ಒಂದು ಸಂವಿಧಾನವಿದೆ. ಅದರ ಎಲ್ಲ ಚಟುವಟಿಕೆಗಳು ಅದಕ್ಕನುಗುಣವಾಗಿಯೇ ನಡೆಯುತ್ತವೆ. ಸಂವಿಧಾನವು ಜಮಾಅತ್‌ನ ಸದಸ್ಯರಿಂದ ಚುನಾಯಿತರಾದ ಪ್ರತಿನಿಧಿಗಳಿಂದ ರೂಪಿಸಲ್ಪಟ್ಟಿದೆ. ಅದರಲ್ಲಿ

ಜಮಾಅತ್‌ನ ಧ್ಯೇಯವನ್ನು ಈ ರೀತಿ ವಿವರಿಸಲಾಗಿದೆ.

ಜಮಾಅತೆ ಇಸ್ಲಾಮೀ ಹಿಂದ್ ಇದರ ಧ್ಯೇಯವು 'ಇಕಾಮತುದ್ದೀನ್' (ಧರ್ಮದ ಸಂಸ್ಥಾಪನೆ) ಆಗಿದೆ. ಅದರ ನೈಜ ಪ್ರೇರಕ ಶಕ್ತಿಯು ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕ ವಿಜಯವನ್ನು ಗಳಿಸುವುದಾಗಿದೆ.

ವಿವರಣೆ: 'ಇಕಾಮತುದ್ದೀನ್' ಎಂಬುದರಲ್ಲಿರುವ 'ದೀನ್'ನ ತಾತ್ಪರ್ಯವು ಪ್ರಪಂಚದ ಒಡೆಯನಾದ ಅಲ್ಲಾಹನು ತನ್ನ ಸಕಲ ಪ್ರವಾದಿಗಳ ಮೂಲಕ ವಿವಿಧ ಕಾಲ ಮತ್ತು ದೇಶಗಳಲ್ಲಿ ಕಳುಹಿಸುತ್ತಿದ್ದ, ಕೊನೆಗೆ ತನ್ನ ಅಂತ್ಯ ಪ್ರವಾದಿಯಾದ ಹ. ಮುಹಮ್ಮದ್(ಸ) ಅವರ ಮೂಲಕ ಮಾನವಕುಲದ ಮಾರ್ಗದರ್ಶನಕ್ಕಾಗಿ, ಅಂತಿಮ ಹಾಗೂ ಪರಿಪೂರ್ಣ ರೂಪದಲ್ಲಿ ಅವತೀರ್ಣಗೊಳಿಸಿದಂತಹ ಸತ್ಯಧರ್ಮವಾಗಿದೆ. ಇಂದು ಲೋಕದಲ್ಲಿ ಅಧಿಕೃತ ಹಾಗೂ ಅಲ್ಲಾಹನಲ್ಲಿ ಸ್ವೀಕಾರಾರ್ಹವಾಗಿ ಉಳಿದಿರುವ ಧರ್ಮ ಇದೊಂದು ಮಾತ್ರ. ಅದರ ಹೆಸರೇ 'ಇಸ್ಲಾಮ್.'

ಈ ಧರ್ಮವು ಮಾನವನ ಅಂತರಂಗ ಬಹಿರಂಗಗಳನ್ನೂ ಮಾನವ ಜೀವನದ ವೈಯಕ್ತಿಕ ಹಾಗೂ ಸಾಮೂಹಿಕವಾದ ಎಲ್ಲ ರಂಗಗಳನ್ನೂ ಒಳಗೊಂಡಿದೆ. ವಿಶ್ವಾಸಶ್ರದ್ಧೆ, ಆರಾಧನೆಗಳು ಮತ್ತು ಚಾರಿತ್ರ್ಯದಿಂದ ತೊಡಗಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದವರೆಗೆ ಮಾನವ ಜೀವನದ ಯಾವ ವಿಭಾಗವೂ ಅದರ ಪರಿಧಿಯ ಹೊರಗಿಲ್ಲ.

ಈ ಧರ್ಮವು ದೇವಸಂಪ್ರೀತಿ ಮತ್ತು ಪರಲೋಕ ವಿಜಯದ ಭರವಸೆ ನೀಡುವಂತೆಯೇ ಐಹಿಕ ಸಮಸ್ಯೆಗಳ ಸೂಕ್ತ ಪರಿಹಾರಕ್ಕೆ ಅತ್ಯುತ್ತಮವಾದ ಜೀವನ ವ್ಯವಸ್ಥೆಯೂ ಆಗಿದೆ. ಶ್ರೇಷ್ಠ ಹಾಗೂ ಪ್ರಗತಿಶೀಲವಾದ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದ ನಿರ್ಮಾಣವು ಇದರ ಸಂಸ್ಥಾಪನೆಯಿಂದಲೇ ಸಾಧ್ಯ.

ಈ ಧರ್ಮದ 'ಇಕಾಮತ್' ಎಂಬುದರ ತಾತ್ಪರ್ಯವು ಯಾವುದೇ ವಿಧದ ವಿಂಗಡನೆ ಮತ್ತು ವಿಭಜನೆಯಿಲ್ಲದೆ, ಈ ಧರ್ಮವನ್ನು ಸಂಪೂರ್ಣವಾಗಿ ನಿಸ್ವಾರ್ಥತೆ ಮತ್ತು ಏಕಾಗ್ರತೆಯಿಂದ ಅನುಸರಿಸುವುದಾಗಿದೆ. ವ್ಯಕ್ತಿಯ ವಿಕಾಸ, ಸಮಾಜದ ನಿರ್ಮಾಣ ಮತ್ತು ರಾಷ್ಟ್ರದ ರಚನೆಗಳೆಲ್ಲವೂ ಈ ಧರ್ಮಕ್ಕೆ ಅನುರೂಪವಾಗಿರುವಂತೆ ಮಾನವ ಜೀವನದ ವೈಯಕ್ತಿಕ ಹಾಗೂ ಸಾಮಾಜಿಕವಾದ ಎಲ್ಲ ರಂಗಗಳಲ್ಲಿಯೂ ಇದನ್ನು ಸಂಪೂರ್ಣವಾಗಿ ಜಾರಿಗೊಳಿಸುವುದಾಗಿದೆ.

ಈ ಧರ್ಮದ ಸಂಸ್ಥಾಪನೆಯ ಅತ್ಯುತ್ತಮ ಹಾಗೂ ವ್ಯಾವಹಾರಿಕ ಮಾದರಿಯು

ಹ. ಮುಹಮ್ಮದ್(ಸ) ಮತ್ತು ಖುಲಫಾವುರ್ರಾಶಿದೀನ್ (ಸತ್ಯಸಂಧ ಖಲೀಫರುಗಳಾದ) ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲೀಯವರು(ರ) ಸ್ಥಾಪಿಸಿ ತೋರಿಸಿರುವುದಾಗಿದೆ. **(ಜಮಾಅತೆ ಇಸ್ಲಾಮೀ ಹಿಂದ್ ಸಂವಿಧಾನ: ಪರಿಚ್ಛೇದ: 4)**

ಈ ಧ್ಯೇಯ ಸಾಧನೆಗೆ ಜಮಾಅತೆ ಇಸ್ಲಾಮೀ ಹಿಂದ್ ಯಾವುದೇ ರೀತಿಯ ಒತ್ತಾಯ ಬಲಾತ್ಕಾರಗಳನ್ನು ಬಳಸುವುದಿಲ್ಲ. ಹಿಂಸೆ, ಅಕ್ರಮ ಅಥವಾ ಗಲಭೆ-ಗೊಂದಲ ಗಳನ್ನು ನಿರ್ಮಿಸಿ ಕಾರ್ಯ ಸಾಧನೆ ಮಾಡುವುದು ಕೂಡಾ ಜಮಾಅತ್‌ನ ನೀತಿಯಲ್ಲ. ಜಮಾಅತೆ ಇಸ್ಲಾಮೀ ಹಿಂದ್‌ನ ಸಂವಿಧಾನವು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ:

ಧ್ಯೇಯ ಸಾಧನೆಗಾಗಿ ಜಮಾಅತೆ ಇಸ್ಲಾಮೀ ಹಿಂದ್, ಇದರ ಕಾರ್ಯ ವಿಧಾನವು ಈ ಕೆಳಗಿನಂತಿರುವುದು:

1. ಕುರ್‌ಆನ್ ಮತ್ತು ಸುನ್ನತ್‌ಗಳು ಜಮಾಅತ್‌ನ ಚಟುವಟಿಕೆಯ ಬುನಾದಿಯಾಗಿರುವುವು. ಇತರ ಸಕಲವೂ ಎರಡನೆಯ ಸ್ಥಾನದಲ್ಲಿದ್ದು, ಕುರ್‌ಆನ್ ಮತ್ತು ಸುನ್ನತ್‌ನ ಆಧಾರದಲ್ಲಿ ಅವಕಾಶವಿರುವಷ್ಟು ಮಾತ್ರ ಅವುಗಳನ್ನು ಪರಿಗಣಿಸಲಾಗುವುದು.

2. ಜಮಾಅತ್ ತನ್ನ ಎಲ್ಲಾ ಚಟುವಟಿಕೆಗಳಲ್ಲಿಯೂ ನೈತಿಕ ಮೇರೆಗಳನ್ನು ಪಾಲಿಸುವುದು. ಸತ್ಯಸಂಧತೆ ಮತ್ತು ಪ್ರಾಮಾಣಿಕತೆಗಳಿಗೆ ಸರಿಹೊಂದದ, ಕೋಮು ದ್ವೇಷ, ವರ್ಗ ಸಂಘರ್ಷ ಹಾಗೂ ಭೂಮಿಯಲ್ಲಿ ಗೊಂದಲಗಳನ್ನುಂಟು ಮಾಡುವಂತಹ ಯಾವುದೇ ಮಾಧ್ಯಮ ಮತ್ತು ವಿಧಾನಗಳನ್ನು ಅದೆಂದೂ ಅನುಸರಿಸದು.

3. ಜಮಾಅತ್ ತನ್ನ ಧ್ಯೇಯ ಸಾಧನೆಗಾಗಿ ರಚನಾತ್ಮಕ ಹಾಗೂ ಶಾಂತಿಯುತ ಮಾರ್ಗಗಳನ್ನು ಅವಲಂಬಿಸುವುದು. ಅರ್ಥಾತ್ ಪ್ರಚಾರ, ಬೋಧನೆ ಮತ್ತು ಪ್ರಸಾರ ಗಳ ಮೂಲಕ ವಿಚಾರ ಮತ್ತು ಚಾರಿತ್ರ್ಯಗಳನ್ನು ಸುಧಾರಿಸುವುದು. ತನ್ಮೂಲಕ ದೇಶದ ಸಾಮಾಜಿಕ ಜೀವನದಲ್ಲಿ ಉದ್ದೇಶಿತ ಸತ್ಕ್ರಾಂತಿಗಾಗಿ ಜನಾಭಿಪ್ರಾಯವನ್ನು ರೂಢಿಸುವುದು

(ಜಮಾಅತೆ ಇಸ್ಲಾಮೀ ಹಿಂದ್ ಸಂವಿಧಾನ: ಪರಿಚ್ಛೇದ: 5:1-3)

ಜಮಾಅತ್‌ನ ಸಂದೇಶವು ಹಿಂದೂ-ಮುಸ್ಲಿಮರೆಂಬ ಭೇದವಿಲ್ಲದೆ ಎಲ್ಲ ದೇಶ ಬಾಂಧವರಿಗೂ ಆಗಿದೆ. ಜಮಾಅತ್ ಬಂಧುಗಳು ಈ ಎರಡೂ ಜನಾಂಗಗಳಿಗೆ ತಮ್ಮ ಸಂದೇಶವನ್ನು ತಲಪಿಸುತ್ತಾರೆ.

ಧಾರ್ಮಿಕ ಮತ್ತು ನೈತಿಕ ಮೇರೆಯೊಳಗಿದ್ದುಕೊಂಡು ರಾಷ್ಟ್ರ ಮತ್ತು ಸಮಾಜದ

ಎಲ್ಲ ಚಟುವಟಿಕೆಗಳಲ್ಲೂ ಜಮಾಅತ್ ತನ್ನ ಶಕ್ತ್ಯಾನುಸಾರ ಭಾಗವಹಿಸುತ್ತದೆ. ದೇಶವ್ಯಾಪೀ ಮಟ್ಟದಲ್ಲಿ ಗಲಭೆಗಳಿಂದ ಸಂತ್ರಸ್ತರಾದವರು, ನೆರೆ - ಬರಪೀಡಿತರು, ಅಗ್ನಿ ದುರಂತಕ್ಕೀಡಾದವರು ಮತ್ತಿತರ ಮಾನವಕೃತ ಮತ್ತು ಪ್ರಾಕೃತಿಕ ಅನಾಹುತಗಳಿಂದ ಸಂತ್ರಸ್ತರಾದ ಜನರಿಗೆ ಜಾತಿ, ಮತ, ವರ್ಣಗಳ ಭೇದವಿಲ್ಲದೆ ನೆರವಾಗುವ ಪರಿಪಾಠವನ್ನು ಜಮಾಅತೆ ಇಸ್ಲಾಮಿ ಹಿಂದ್ ತನ್ನ ಸ್ಥಾಪನೆಯ ದಿನದಿಂದ ಈ ತನಕ ಇರಿಸಿಕೊಂಡಿದೆ.

ಜಮಾಅತೆ ಇಸ್ಲಾಮಿ ಹಿಂದ್ ತನ್ನ ಧ್ಯೇಯ ಸಾಧನೆಗಾಗಿ 4 ವರ್ಷಗಳ ಅವಧಿಗೆ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಜಮಾಅತ್‌ನ ರಾಷ್ಟ್ರ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳಿರುವ ಕೇಂದ್ರ ಸಲಹಾ ಸಮಿತಿಯು ಚತುರ್ವರ್ಷ ಕಾರ್ಯಕ್ರಮಗಳನ್ನು ಅಂಗೀಕರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತದೆ. ಪ್ರಸಕ್ತ ಕಾಲಾವಧಿಗೆ ಜಮಾಅತೆ ಇಸ್ಲಾಮಿ ಹಿಂದ್ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಅದರಿಂದ ತಿಳಿಯಬಹುದು. ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ಅದರಲ್ಲಿ ಎಷ್ಟರ ಮಟ್ಟಿಗೆ ಸಹಕರಿಸಬಹು ದೆಂಬುದನ್ನು ತಾನೇ ನಿರ್ಧರಿಸಿಕೊಳ್ಳಬಹುದು.

○○○